International Journal of Kannada Research
www.kannadajournal.com

ISSN: 2454–5813
IJKR 2022; 8(4): 01-16
© 2022 IJKR
www.kannadajournal.com
Received: 01-08-2022
Accepted: 04-09-2022

**Dr. M Govind Pai**
A 403, Pride Enchanta,
Mysore Road, Opp BHEL,
Dipanjalinagar, Bangalore,
Karnataka, India

**Corresponding Author:**
**Dr. M Govind Pai**
A 403, Pride Enchanta,
Mysore Road, Opp BHEL,
Dipanjalinagar, Bangalore,
Karnataka, India

# ಕುಮಾರವ್ಯಾಸನ ಗದಗು ಭಾರತ, ಒಂದು ಕಿರು ಪರಿಚಯ

**Dr. M Govind Pai**

**ಅಮೂರ್ತ**

ಕರ್ಣಾಟಕ ರಾಜ್ಯದ ಗದಗು ಮುಖ್ಯವಾಗಿ ಈ ನಾಲ್ವರಿಂದ ಪ್ರಸಿದ್ಧವಾಗಿದೆ, ಶ್ರೀ ವೀರನಾರಾಯಣ, ನಾರಣಪ್ಪ, ಪಂಚಾಕ್ಷರಿ ಗವಾಯಿ ಮತ್ತು ಭೀಮಸೇನ್ ಜೋಶಿ. ಈ ಮೇಲೆ ಹೇಳಿದವರಲ್ಲಿ 'ಗದಗು ಭಾರತ' ಅಥವಾ 'ಕನ್ನಡ ಭಾರತ'ವನ್ನು ಬರೆದ ನಾರಣಪ್ಪನ ಬಗ್ಗೆ ೯ನೆ ಕ್ಲಾಸಿನಲ್ಲಿದ್ದಾಗ ಪಠ್ಯಪುಸ್ತಕದಲ್ಲಿ (ಪುಸ್ತಕದ ಹೆಸರನ್ನು ಮರೆತಿದ್ದೇನೆ) ಓದಿದ ಕತೆಯನ್ನು ಹೇಳುತ್ತೇನೆ. ಮೊದಲು ಕತೆ, ಆನಂತರ ಹೈಸ್ಕೂಲಿನಲ್ಲಿ ಓದಿದ ನಾರಣಪ್ಪನ ಪದ್ಯಗಳನ್ನು, ಇತರರು ಬರೆದ ಮಹಾಭಾರತದ ಕತೆಗಳನ್ನು ನೆನಪಿನಿಂದ ಕೆದಕಿ, ಅವುಗಳ ಮೂಲ ನುಡಿಗಳನ್ನು ಗದಗು ಭಾರತದಲ್ಲಿ ಹುಡುಕಿ, ಉದ್ಧರಿಸಿ ಬರೆಯುತ್ತೇನೆ, ಅರ್ಥವನ್ನು ಕೊಡುತ್ತೇನೆ. ಇಲ್ಲಿ ಹೇಳಿದ ಎಲ್ಲ ಪ್ರಕರಣಗಳಲ್ಲಿ ಮುಖ್ಯ ನುಡಿಗಳನ್ನು ಮಾತ್ರ ಬರೆಯುತ್ತೇನೆ. ಈ ಲೇಖನವು ಸ್ವಲ್ಪ ದೀರ್ಘವಾಗಿದೆ ಎಂದು ಗೊತ್ತು, ಹೃಸ್ವ ಮಾಡಿದರೆ ನಾರಣಪ್ಪನಿಗೆ ಅಪಚಾರವಾಗಬಹುದೆಂದು ಹೆದರಿ ಹಾಗೆ ಮಾಡಲಿಲ್ಲ. ಲೇಖನ ದೀರ್ಘವಾಗಿದ್ದರೆ ಕಿರು ಪರಿಚಯ ಎನ್ನುವುದು ಯಾಕೆ ಎಂಬ ಪ್ರಶ್ನೆ ಬರುತ್ತದೆ. ಗದಗು ಭಾರತದಂತಹ ಶ್ರೇಷ್ಠ ಕಾವ್ಯಕ್ಕೆ ಈ ಪರಿಚಯ ಕಿರಿದಾದದ್ದೇ! ನಾನೇನು ವಿದ್ವಾಂಸನಲ್ಲ, ಪಂಡಿತನಂತೂ ಮೊದಲೇ ಅಲ್ಲ. ಕನ್ನಡ ಸಾಹಿತ್ಯದ ಮೇಲಿರುವ ಅಪ್ರತಿಮ ಗೌರವದಿಂದಾಗಿ ಈ ಕೆಲಸವನ್ನು ಕೈಕೊಂಡೆ. 1972 ರಿಂದ ವೈದ್ಯಕೀಯ ವೃತ್ತಿ ನಡಿಸಿ, ಎರಡು ದೇಶಗಳಲ್ಲಿನ ವೈದ್ಯಕೀಯ ವಿದ್ಯಾರ್ಥಿಗಳಿಗೆ ಪಾಠ ಹೇಳಿ, ಈಗ ವೈದ್ಯವಿಜ್ಞಾನದ ಮಾಸಿಕಗಳಿಗೆ ಬರೆಯುತ್ತಾ ನನ್ನ ಪ್ರೊಫೆಸರುಗಳ ಋಣವನ್ನು ತೀರಿಸುತ್ತಾ ಇದ್ದೇನೆ. ನನ್ನ ಚಿರಂಜೀವಿಗಳು ಚಿಕ್ಕವರಿದ್ದಾಗ ಅವರಿಗೆ ಲೆಕ್ಕ, ವಿಜ್ಞಾನ, ಇಂಗ್ಲಿಷ್, ಹಿಂದಿ ಕಲಿಸಿ ನನ್ನ ಶಾಲಾ ಮಾಸ್ತರುಗಳ ಋಣ ತೀರಿಸಿಕೊಂಡೆ. ಆದರೆ ಅವರಿಗೆ ಕನ್ನಡ ಕಲಿಸುವ ಪ್ರಮೇಯವೇ ಬಂದಿರಲಿಲ್ಲ. ಬಂದಾಗ, ಅವರು ಉಡುಪಿಯ ಶಾಲೆಯೊಂದರ ಹಾಸ್ಟೆಲ್ ಸೇರಿಬಿಟ್ಟಿದ್ದರು. ಈಗ ಕನ್ನಡದಲ್ಲಿ ಬರೆದು, ನನ್ನ ಕನ್ನಡ ಪಂಡಿತರ ಋಣಭಾರ ತೀರಿಸದಿದ್ದಲ್ಲಿ ಮೇಲೆ ಹೋದಾಗ ಅವರಿಗೆಂತು ಮೊಗ ತೋರಿಸಬಲ್ಲೆ? ಬಗ್ಗೆ ಬರೆಯಲು ಕುಮಾರವ್ಯಾಸನಂತಹ ಕವಿಯ ಕಾವ್ಯವಲ್ಲದೆ ಮತ್ತಾರ ಕಾವ್ಯ ಯೋಗ್ಯ? ಮಹಾಭಾರತದ ಕತೆ ಎಲ್ಲರಿಗೂ ಗೊತ್ತಿದೆ, ಆದುದರಿಂದ ಅದಕ್ಕೆ ಪ್ರಾಮುಖ್ಯತೆಯನ್ನು ಕೊಡುವುದಿಲ್ಲ. ಈ ಕತೆಯಲ್ಲಿ ನಾರಣಪ್ಪನು ಹೇಗೆ ಘಟನೆಗಳನ್ನು ವರ್ಣಿಸಿದ್ದಾನೆ, ಅವನ ಶೈಲಿ ಏನು, ಪಾತ್ರಗಳನ್ನು ಯಾವ ರೀತಿಯಲ್ಲಿ ಚಿತ್ರಿಸಿದ್ದಾನೆ ಎಂಬುದನ್ನು ಅವನ ಕೆಲವು ನುಡಿಗಳನ್ನೇ ಉದ್ಧರಿಸಿ ಹೇಳಿ, ಓದುಗರಲ್ಲಿ ಇಡೀ ಗದಗು ಭಾರತವನ್ನು ಓದುವ ಆಸಕ್ತಿಯನ್ನು ಹುಟ್ಟಿಸುವುದು ನನ್ನ ಪ್ರಯತ್ನ. ಈ ಕಾವ್ಯವು ಸುಲಲಿತ ಕನ್ನಡದಲ್ಲಿದೆ. ವಿವಿಧ ಪಾಠಾಂತರಗಳಿದ್ದ ಗದಗು ಭಾರತದ ಅನೇಕ ಪ್ರತಿಗಳು ಪ್ರಕಾಶಿತವಾಗಿವೆ ಎಂದು ನಾವು ನೆನಪಿಟ್ಟುಕೊಳ್ಳಬೇಕು.

**ಮುಖ್ಯ ಪದಗಳು:** ನಾರಣಪ್ಪ, ಕುಮಾರವ್ಯಾಸ, ಗದಗು ಭಾರತ, ಕನ್ನಡ ಭಾರತ

## ಪೀಠಿಕೆ

ನಾರಣಪ್ಪನು ಹುಟ್ಟಿದ್ದು ಕ್ರಿ. ಶ. 1230 - 35 ರ ಒಳಗೆ[1] ಧಾರವಾಡದ ಹತ್ತಿರದ ಗ್ರಾಮ ಕೋಳಿವಾಡದಲ್ಲಿ.

ಅವನು ಒದು ಬರಹ ತಿಳಿದವನಲ್ಲ, ನಿರಕ್ಷರಕುಕ್ಷಿ. ಅಲ್ಲಲ್ಲಿ ಕೆಲಸಮಾಡಿಕೊಂಡು ಹೊಟ್ಟೆಹೊರೆಯುತ್ತಿದ್ದ. ಒಂದು ರಾತ್ರಿ ಅವನಿಗೆ ಕನಸಿನಲ್ಲಿ "ನೀನು ಗದುಗಿನ ವೀರನಾರಾಯಣನ ಜಾತ್ರೆಗೆ ಹೋಗು" ಎಂದು ಯಾರೋ ಹೇಳಿದಂತೆ ಭಾಸವಾಯಿತು. 'ಏನೋ' ಎಂದು ಸುಮ್ಮನಿದ್ದ. ನಾಲ್ಕೈದು ರಾತ್ರಿ ಕನಸಿನಲ್ಲಿ ಹೀಗೆಯೇ ಕೇಳಿಸಿಕೊಂಡಾಗ, ಛಲಹಿಡಿದು ಜಾತ್ರೆಗೆ ಹೋದ. ಅಲ್ಲಿ ಹೋಗಿ ಏನು ಮಾಡಬೇಕೆಂದು ಕನಸಿನಲ್ಲಿ ಯಾರೂ ಬೋಧಿಸಿದ್ದಿಲ್ಲ, ಹಾಗಾಗಿ ಅಲ್ಲಿ ಇಲ್ಲಿ ಅಡ್ಡಾಡಿದ, ಉತ್ಸವ ನಡೆಯುವಲ್ಲಿ ಹೋದ, ಸಮಾರಾಧನೆಯಲ್ಲಿ ಉಂಡ, ಸಂತೆಯಲ್ಲಿ ತಿರುಗಾಡಿದ, ಎಲ್ಲಿಯೂ ಅವನಿಗೆ ಏನೂ ಸ್ವಾರಸ್ಯ ಕಾಣಲಿಲ್ಲ. ಕೊನೆಗೆ ಪ್ರಸಾದ ಹಂಚುವಲ್ಲಿ ಹೋದ. ಅಲ್ಲಿ ಎಲೆಗಳನ್ನು ಜೋಡಿಸಿ, ದೊನ್ನೆಗಳಂತೆ ಮಾಡಿ ಅದರಲ್ಲಿ ಪಾಯಸವನ್ನು ಹಂಚುತ್ತಿದ್ದರು. ಚಿಕ್ಕ ಹುಡುಗನೊಬ್ಬ, "ನನಗೆ ತುಂಬಾ ಪಾಯಸಬೇಕು, ದೊಡ್ಡ ದೊನ್ನೆಯಲ್ಲಿ ಕೊಡಬೇಕು" ಎಂದು ಹಠಹಿಡಿಯುತ್ತಿದ್ದ. ಅದನ್ನು ಕೇಳಿ ಅಲ್ಲಿಯವರೊಬ್ಬರು, "ಏನೋ, ನಿನಗೆ ದುರ್ಯೋಧನನಿಗಿಂತ ಹೆಚ್ಚಿನ ಛಲವೇ?" ಎಂದು ಗದರಿಸಿದರು. ಇದನ್ನು ಕೇಳಿದ ವೃದ್ಧನೊಬ್ಬನು ಕಣ್ಣಲ್ಲಿ ನೀರುತಂದುಕೊಂಡು ಅಲ್ಲಿಂದ ಎದ್ದು ಹೋದ, ಇದನ್ನು ನಾರಣಪ್ಪನು ಗಮನಿಸಿಕೊಂಡು, ಅವನನ್ನು ಹಿಂಬಾಲಿಸಿ, "ಸ್ವಾಮಿ, ದುರ್ಯೋಧನನನ್ನು ಹೀಗೆಳೆದಾಗ ತಮಗೇಕೆ ದುಃಖವಾಯಿತು?" ಎಂದು ಕೇಳಿದ. "ಏನೂ ಇಲ್ಲಪ್ಪ, ಕಣ್ಣಲ್ಲಿ ಕಸಬಿತ್ತು" ಎಂದು ಜಾರಿಕೊಳ್ಳಲು ಆ ವೃದ್ಧ ಯತ್ನಿಸಿದ. ಆದರೆ ನಾರಣಪ್ಪ ಹೇಳಲೇಬೇಕೆಂದು ಪಟ್ಟುಹಿಡಿದಾಗ "ನಾನು ದುರ್ಯೋಧನನ ಮಿತ್ರ ಅಶ್ವತ್ಥಾಮ" ಎಂದು ಒಲ್ಲದ ಮನಸ್ಸಿನಿಂದ ಅವನು ಒಪ್ಪಿಕೊಂಡ. ಅಶ್ವತ್ಥಾಮ ಅಂದರೆ ಕೌರವ ಪಾಂಡವರ ಶಸ್ತ್ರಗುರು ದ್ರೋಣಾಚಾರ್ಯರ ಮಗ, ಆತ ಚಿರಂಜೀವಿ, ಮರಣವಿಲ್ಲದವ. ದುರ್ಯೋಧನನಿಗೆ ಕರ್ಣ ಮತ್ತು ಅಶ್ವತ್ಥಾಮರು ಅತ್ಯಂತ ಪ್ರಿಯ ಮಿತ್ರರು. ದುರ್ಯೋಧನನು ಪ್ರಾಣವನ್ನು ಬಿಡುವಾಗ ಬಳಿಯಿದ್ದವನು ಅಶ್ವತ್ಥಾಮ ಒಬ್ಬನೇ.

ಅಶ್ವತ್ಥಾಮನೊಡನೆ ನಾರಾಣಪ್ಪನು ತನಗೆ ಮಹಾಭಾರತದ ಕಥೆಯನ್ನು ಸಂಪೂರ್ಣವಾಗಿ ಹೇಳಬೇಕೆಂದು ಪರಿಪರಿಯಾಗಿ ಬೇಡಿಕೊಂಡಾಗ ಅವನು ಬಗ್ಗಲೇಬೇಕಾಯಿತು. ಮಾರನೇ ದಿನದಿಂದ ಪ್ರತಿದಿನ ನಸುಕಿನಲ್ಲಿ ನಾರಣಪ್ಪನು ಕೆರೆಯಲ್ಲಿ ಮಿಂದು, ಒದ್ದೆ ಬಟ್ಟೆಯನ್ನುಟ್ಟು, ಶ್ರೀ ವೀರನಾರಾಯಣನ ಸನ್ನಿಧಿಗೆ ಬರಬೇಕೆಂದೂ, ಅಲ್ಲಿ ಒಂದು ಬಿಳಿಬಟ್ಟೆಯ ಪರದೆಯನ್ನು ಹಾಕಬೇಕೆಂದೂ, ಅದರಿಬ್ಬದಿಯಲ್ಲಿ ಒಬ್ಬರಿಗೊಬ್ಬರು ಕಾಣದಂತೆ ಕೂತಿದ್ದಾಗ ಅಶ್ವತ್ಥಾಮನು ಕಥೆಯನ್ನು ಹೇಳುವನೆಂದೂ, ನಾರಣಪ್ಪನು ಕೇಳಬೇಕೆಂದೂ ಎನ್ನುವ ಏರ್ಪಾಡಾಯಿತು.

ಅದೇ ಪ್ರಕಾರ ಮರುದಿನ ನಾರಣಪ್ಪನು ಪರದೆಯ ಈಚೆ ಕೂತಾಗ ಆಚೆ ಕಡೆಯಿಂದ ಅಶ್ವತ್ಥಾಮನ ಕಂಚಿನ ಕಂಠದಿಂದ ಭೋರ್ಗರೆವ ಅಲೆಗಳಂತೆ ಮಹಾಭಾರತದ ಕತೆಯು ಹೊರಹೊಮ್ಮಿತು. ಇದನ್ನು ಕೇಳುತ್ತಲೇ ನಾರಣಪ್ಪನ ಮೈಯಲ್ಲಿ ವಿದ್ಯುತ್ಸಂಚಾರವಾದಂತಾಗಿ ಅಪೂರ್ವ ವಿದ್ವತ್ತು, ಪಾಂಡಿತ್ಯ ಅವನಲ್ಲಿ ಉಂಟಾಯಿತು. ಆ ಕ್ಷಣದಿಂದಲೇ ಅವನು ತನ್ನ ಆಡು ಭಾಷೆ ಹಳೆಗನ್ನಡ ಮಿಶ್ರಿತ ಕನ್ನಡದಲ್ಲಿ, ಭಾಮಿನಿ ಷಟ್ಪದಿ ಛಂದಸ್ಸಿನಲ್ಲಿ ಈಗ ನಾವು "ಗದಗು ಭಾರತ" ಅಥವಾ “ಕನ್ನಡ ಭಾರತ” ಎಂದು ಕರೆಯುತ್ತಿರುವ ಗ್ರಂಥವನ್ನು ರಚಿಸಿದನೆಂದು ನನ್ನ ಪಠ್ಯಪುಸ್ತಕದಲ್ಲಿದ್ದ ಪಾಠದಿಂದ ನಮಗೆ ತಿಳಿದುಬರುತ್ತದೆ.

ಇದೇ ರೀತಿ ಹತ್ತು ದಿನಗಳ ವರೆಗೆ ನಡೆದಾಗ ನಾರಣಪ್ಪನು ಮಹಾಭಾರತದ ಮೊದಲ ಹತ್ತು ಪರ್ವಗಳನ್ನು ಬರೆದನು. ಕೊನೆಯ ಪರ್ವ ಗದಾಪರ್ವವನ್ನು ಬರೆದ ಮೇಲೆ ಅವನಿಗೇನೆನ್ನಿಸಿತೋ, ಎದ್ದು ನಿಂತು ಪರದೆಯ ಆಚೆ ನೋಡಿದ. ಆ ಬದಿಯಲ್ಲಿದ್ದ ದೃಶ್ಯವನ್ನು ನೋಡಿ ಬೆರಗಾದ. ಅವನ ಮುಂದೆ ಇಡೀ ಕುರುಕ್ಷೇತ್ರವೇ ಇತ್ತು, ಅದರ ವಿಹಂಗಮ ನೋಟವನ್ನು ನೋಡಿದ. ಎಲ್ಲೆಲ್ಲಿ ನೋಡಿದರೂ ಹೆಣಗಳು, ಗಾಯಾಳುಗಳು, ಅವರ ನೋವಿನ ರೋದನ, ಹೆಂಗಸರ, ಮಕ್ಕಳ ಆಕ್ರಂದನ, ರಕ್ತದ ಹೊಳೆ, ವಿನಾಶದ ತಾಂಡವ. ಇದನ್ನು ಕಂಡು ಹೌಹಾರಿ ಮೂರ್ಛೆಹೋದ. ತಿಳಿವು ಬಂದಾಗ ಅವನ ಮುಂದೆ ಪರದೆಯಲ್ಲದೆ ಮತ್ತೇನೂ ಇರಲಿಲ್ಲ. ಆ ಕ್ಷಣವೇ ಅವನ ಕವಿತಾ ಶಕ್ತಿ ಬತ್ತಿಹೋಯಿತು. ಆನಂತರ ಅಶ್ವತ್ಥಾಮನನ್ನು ಆತ ಕಂಡದ್ದೂ ಇಲ್ಲ, ಅವನು ಬಂದದ್ದೂ ಇಲ್ಲ.

ಈ ಕತೆಯ ಅನೇಕ ರೂಪಾಂತರಗಳನ್ನು ನಾನು ಓದಿದ್ದೇನೆ ಮತ್ತು ಕೇಳಿದ್ದೇನೆ. ನಾರಣಪ್ಪನು ಓದು ಬರಹ ತಿಳಿದವನು, ಒಂದೂರಿನ ಶಾನುಭೋಗನಾಗಿದ್ದವನು ಎನ್ನುವವರು ಕೆಲವರು, ಅವನ ಕನಸಿನಲ್ಲಿ ಬಂದವನು ಅಶ್ವತ್ಥಾಮನೆ ಎನ್ನುತ್ತಾರೆ ಮತ್ತಿತರರು. ಅಲ್ಲ, ಅವನು ವೀರನಾರಾಯಣನೇ ಎಂದವರೂ ಇದ್ದಾರೆ. ನಾರಣಪ್ಪನು ಕೃಷ್ಣದೇವರಾಯನ ಕಾಲದವನು ಎಂದು ಪ್ರತಿಪಾದಿಸಿದವರು ಹಲವರು. ಅಶ್ವತ್ಥಾಮನಿಂದ ಕತೆಯನ್ನು ಕೇಳಿ ಸಾಯಂಕಾಲ ತನ್ನ ಸ್ನೇಹಿತನಿಂದ ನಾರಣಪ್ಪನು ಕಾವ್ಯವನ್ನು ಬರೆಸಿದನೆಂದೂ, ಗದಾಯುದ್ಧದ ರಚನೆಯಾದ ಬಳಿಕ ಅಶ್ವತ್ಥಾಮನ ವಿಚಾರವನ್ನು ಅವನೊಡನೆ ಹೇಳಿದಾಗ ಅಲ್ಲಿಯೇ ಕುಸಿದುಬಿದ್ದು ಸತ್ತನೆಂದೂ ಒಂದು ಅಭಿಪ್ರಾಯವಿದೆ. ಗದಾಯುದ್ಧದಲ್ಲಿ ದುರ್ಯೋಧನನ ಮರಣಾನಂತರ ಅಶ್ವತ್ಥಾಮನಿಗೆ ಮುಂದಿನ ಘಟನೆಗಳಲ್ಲಿ ಆಸಕ್ತಿ ಹೊರಟು ಹೋಯಿತು. ಹೀಗಾಗಿ ಅವನಿಗೆ ಗದಾಪರ್ವದ ತನಕ ಮಾತ್ರ ಕತೆ ಹೇಳಲು ಸಾಧ್ಯವಾಯಿತೆಂದೂ ಹೇಳುತ್ತಾರೆ. ಉಪಪಾಂಡವರನ್ನು ಹತ್ಯೆಮಾಡಿದ ಪಾಪಕ್ಕೆ ಶಿಕ್ಷೆಯಾಗಿ ಅಶ್ವತ್ಥಾಮನ ತಲೆಯಿಂದ ಮಣಿಯನ್ನು ಕೃಷ್ಣನು ತೆಗೆಸಿದ ನಂತರ ಮತಿಭ್ರಾಂತನಾಗಿ ತಿರುಗಾಡುತ್ತಿದ್ದ ಅವನು ಮಹಾಭಾರತದ ಕತೆಯನ್ನು ಇಷ್ಟು ವಿಸ್ತಾರವಾಗಿ ಹೇಗೆ ಹೇಳಿದನೆಂದು ಸಂದೇಹಮಾಡಿದವರೂ ಇದ್ದಾರೆ.

ಅಭಿಪ್ರಾಯ, ವಿಚಾರಗಳು ಹೇಗೂ ಇರಲಿ, ನಾರಣಪ್ಪನು ಬರೆದ ಕಾವ್ಯವು ಅತೀ ಉತ್ಕೃಷ್ಣ ಎಂಬುದು ನಿರ್ವಿವಾದ.

**ತಾನು ಮತ್ತು ತನ್ನ ಕಾವ್ಯದ ಬಗ್ಗೆ[2]**

ಈ ಗ್ರಂಥದ ಮೊದಲ ಪರ್ವ ಆದಿ ಪರ್ವದಲ್ಲಿ ನಾರಣಪ್ಪನು "ಕುಮಾರವ್ಯಾಸ" ಎಂಬ ಬಿರುದನ್ನು ತನಗೆ ತಾನೇ ಕೊಡುತ್ತಾನೆ ಮತ್ತು ತನ್ನನ್ನೂ, ತನ್ನ ಕಾವ್ಯವನ್ನೂ ಹೊಗಳುತ್ತಾನೆ. ಅದೇನೂ ತಪ್ಪಲ್ಲ. ಅನೇಕ ಮಹಾಕವಿಗಳು ತಮ್ಮ ಗ್ರಂಥದ ಆದಿಯಲ್ಲಿ ತಮ್ಮನ್ನೋ, ತಮ್ಮ ಇಷ್ಟದೇವತೆಗಳನ್ನೋ, ಗ್ರಂಥವನ್ನೋ, ಗುರುಗಳನ್ನೋ ಅಥವಾ ತಮಗೆ ಆಶ್ರಯಕೊಟ್ಟ ರಾಜ ಮಹಾರಾಜರುಗಳನ್ನೋ ಹೊಗಳುವುದು, ಸ್ತುತಿಸುವುದು ಸಾಮಾನ್ಯ. ನಾರಣಪ್ಪನೂ ಅದನ್ನೇ ಮಾಡಿದ್ದಾನೆ. ಆದಿಕವಿ ಪಂಪನೂ ಪಂಪ ಭಾರತದ (ವಿಕ್ರಮಾರ್ಜುನವಿಜಯ) ಪ್ರಥಮ ಆಶ್ವಾಸದ ನುಡಿ 1 - 51ರಲ್ಲಿ ಚಾಳುಕ್ಯ ವಂಶವನ್ನೂ, ಇಮ್ಮಡಿ ಅರಿಕೇಸರಿ ರಾಜನನ್ನೂ ಬಹುವಾಗಿ ಹೊಗಳಿ ಅವನನ್ನು ಅರ್ಜುನನಿಗೆ ಹೋಲಿಸಿದ್ದಾನೆ.

ಈಗ ನನಗೆ ದೊರಕಿರುವ ಗದಗು ಭಾರತದ ಪ್ರತಿಗಳು ಮೈಸೂರಿನ ಗವರ್ನಮೆಂಟ್ ಒರಿಯಂಟಲ್ ಪ್ರೆಸ್ ಮತ್ತು ಮೈಸೂರು ವಿಶ್ವವಿದ್ಯಾಲಯದವರು 1910 - 40 ರ ದಶಕದಲ್ಲಿ ಪ್ರಕಟಿಸಿದ ಪ್ರತಿಗಳು. ಅವು ಅನೇಕ ಸಂಪುಟಗಳಲ್ಲಿವೆ ಮತ್ತು ಅವುಗಳನ್ನು ಬೇರೆ ಬೇರೆ ಪಂಡಿತರು ಸಂಪಾದನ ಮಾಡಿದ್ದಾರೆ, ಅವುಗಳಲ್ಲಿ ಹಳೆಗನ್ನಡ ಸ್ವಲ್ಪ ಹೆಚ್ಚೆ ಇದೆ. ಮೊದಲ ಪರ್ವ ಆದಿಪರ್ವದ ಪೀಠಿಕಾ ಸಂಧಿಯಲ್ಲಿ ನಾರಣಪ್ಪನು ತನ್ನನ್ನು ಮತ್ತು ತನ್ನ ಕೃತಿಯನ್ನು ಎಷ್ಟು ಸುಂದರ ಶೈಲಿಯಲ್ಲಿ ಹೊಗಳುತ್ತಾನೆ ಎಂದು ನೋಡಿ.

ಕೃತಿಯು ಸತ್ಕರ್ಣಾಟಕಕೆ ಭಾ
ರತಕೆ ಮಂಜುಳಮಂಜರಿಯು ಮಹ
ಕೃತಿಗೆ ನಾಯಕನಾದ ಗದುಗಿನ ವೀರನಾರಾಯಣ |
ನುತಕುಮಾರವ್ಯಾಸಮುನಿಯೀ
ಕೃತಿಗೆ ಕರ್ತುವೆನಲ್ಕೆ ಸದರೀ
ಕೃತಿಚಮತ್ಕೃತಿಯೆನಿಸದೇತಕೆ ಸೂರಿ ಸಭೆಯೊಳಗೆ || 13 || (ಆದಿಪರ್ವ, ಪೀಠಿಕಾ ಸಂಧಿ)
ವೀರನಾರಾಯಣನ ಸುಕವಿಕು
ಮಾರವ್ಯಾಸರಚನಾಕೃತಿಯ ಕೇಳುವ
ಸೂರಿಗಳು ಸನಕಾದಿಗಳು ಜಂಗಮಜನಾರ್ದನರು || 14 ನೆ ನುಡಿಯ ಮೊದಲ ಭಾಗ || (ಆದಿಪರ್ವ, ಪೀಠಿಕಾ ಸಂಧಿ)

ಈ ಕೃತಿಯು ಕರ್ಣಾಟಕಕ್ಕೆ ಮತ್ತು ಭಾರತಕ್ಕೆ ಕರ್ಣಾನಂದಕರವಾಗಿರುವ ಹೊಸ ಕಾವ್ಯವು. ಇದರ ನಾಯಕನು ವೀರನಾರಾಯಣ (ಕೃಷ್ಣ), ಬರೆದವನು ಕುಮಾರವ್ಯಾಸ, ಅಂದ ಮೇಲೆ ಪಂಡಿತರ ಸಭೆಯಲ್ಲಿ ಇದು ಚಮತ್ಕಾರ ಕೃತಿ ಏಕಾಗಲಾರದು? ಮಂಜುಳವೆಂದರೆ ಕೇಳಲು ಇಂಪಾದ ಮತ್ತು ಮಂಜರಿಯೆಂದರೆ ಹೂಗುಚ್ಛ ಅಥವಾ ಚಿಗುರುತ್ತಿರುವ ಮೊಗ್ಗು. ಹೀಗೆ ಮಂಜುಳಮಂಜರಿಯೆಂದರೆ ಶ್ರಾವ್ಯವಾದ ಹೊಸ ಕಾವ್ಯ ಎಂಬ ಅರ್ಥ ಕೊಟ್ಟಿದ್ದೇನೆ. ವೀರನಾರಾಯಣನ ಶ್ರೇಷ್ಠ ಕವಿ ಕುಮಾರವ್ಯಾಸನು ರಚಿಸಿದ ಈ ಕೃತಿಯನ್ನು ಕೇಳುವವರು ವಿದ್ವಾಂಸರು, ಸನಕಾದಿ ಮುನಿಗಳು ಮತ್ತು ಜಂಗಮ ಜನಾರ್ದನರು.

ತನ್ನ ಕಾವ್ಯದ ಗುಣಮಟ್ಟಗಳನ್ನು ಮತ್ತು ಇತರ ಸಮಕಾಲೀನ ಕಾವ್ಯಗಳೊಡನೆ ತುಲನೆ ಹೇಗೆ ಮಾಡಿದ್ದಾನೆ ನೋಡಿ. ತನ್ನ ಮಹಾಭಾರತವು ಇತರ ಕಾವ್ಯಗಳಿಗೆ ಗುರು ಸಮಾನ ಎಂದಿದ್ದಾನೆ.

ಅರಸುಗಳಿಗಿದು ವೀರ ದ್ವಿಜರಿಗೆ
ಪರಮವೇದದ ಸಾರ ಯೋಗೀಶ್ವ
ರರ ತತ್ವವಿಚಾರ ಮಂತ್ರಿಜನಕೆ ಬುದ್ಧಿಗುಣ |
ವಿರಹಿಗಳ ಶೃಂಗಾರ ವಿದ್ಯಾ
ಪರಿಣಿತರಲಂಕಾರ ಕಾವ್ಯಕೆ
ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ || 17 ||
(ಆದಿಪರ್ವ, ಪೀಠಿಕಾ ಸಂಧಿ)

ರಾಜರಿಗೆ (ಕ್ಷತ್ರಿಯರಿಗೆ) ಈ ಕಾವ್ಯವು ಶೌರ್ಯ, ಬ್ರಾಹ್ಮಣರಿಗೆ ಶ್ರೇಷ್ಠ ವೇದಗಳ ಸಾರ, ಯೋಗಿಗಳಿಗೆ ತತ್ವವಿಚಾರ, ಮಂತ್ರಿಗಳಿಗೆ ಬುದ್ಧಿವಾದ, ವಿರಹಿಗಳಿಗೆ ಶೃಂಗಾರ ರಸ, ವಿದ್ವಜ್ಜನರಿಗಿದು ಅಲಂಕಾರ ಪ್ರಯೋಗ, ಕಾವ್ಯಗಳಿಗಿದು ಗುರು ಸಮಾನವಾದ ಗ್ರಂಥ ಎಂಬ (ಮಹಾ)ಭಾರತವನ್ನು ಕುಮಾರವ್ಯಾಸನು ರಚಿಸಿದನು. ತಾನು ಓದು ಬರಹ ತಿಳಿದವನಲ್ಲ ಎಂದು ಕುಮಾರವ್ಯಾಸನು ಹೀಗೆ ವಿವರಿಸಿದ್ದಾನೆ.

ಹಲಗೆ ಬಳಪವ ಪಿಡಿಯದೊಂದ
ಗ್ಗಳಿಕೆ ಪದವಿಟ್ಟಳುಪದೊಂದ
ಗ್ಗಳಿಕೆ ಪರರೊಡ್ಡವದ ರೀತಿಯ ಕೊಳದೊಂದಗ್ಗಳಿಕೆ |
ಬಳಸಿ ಬರೆಯಲು ಕಂಠಪತ್ರದ
ಉಲುಹುಗೆಡದಗ್ಗಳಿಕೆ ಎಂಬೀ
ಬಲುಹು ಸಲುವುದು ವೀರನಾರಾಯಣನ ಕಿಂಕರಗೆ || 19 ||
(ಆದಿಪರ್ವ, ಪೀಠಿಕಾ ಸಂಧಿ)

ಸ್ಲೇಟು, ಕಡ್ಡಿ ಹಿಡಿಯಲಿಲ್ಲ (ಶಾಲೆಗೆ ಹೋಗಲಿಲ್ಲ), ಒಮ್ಮೆ ಒಂದು ಶಬ್ದವನ್ನು ಬರೆದು ತಿದ್ದಲಿಲ್ಲ, ಮತ್ತೊಬ್ಬನ ಶೈಲಿಯನ್ನು ಅನುಸರಿಸಿಲ್ಲ, ತಪ್ಪು ತಪ್ಪು ಬರೆದು ತಾಳೆಗರಿಗಳನ್ನು ಹಾಳುಗೆಡವಿಲ್ಲ ಎಂಬ ಕೀರ್ತಿಯು ವೀರನಾರಾಯಣನ ಭಕ್ತನಿಗೆ ಸಲ್ಲುತ್ತದೆ. ಇಲ್ಲಿ ತಾಳೆಗರಿಗೆ

‘ಕಂಠಪತ್ರ’ ಎನ್ನುವ ಬದಲು ‘ಕಂಟಪತ್ರ’ ಎನ್ನಬೇಕು ಎಂದು ನನಗೆ ತೋರುತ್ತದೆ. ‘ಕಂಟಪತ್ರ’ ಎಂದರೆ ಕಂಟವೂ ಪತ್ರವೂ ಎಂದು ದ್ವಂದ್ವ ಸಮಾಸವಾಗುತ್ತದೆ. ‘ಕಂಟ’ ಅಂದರೆ ತಾಳೆಗರಿಯ ಮೇಲೆ ಬರೆಯಲು ಉಪಯೋಗಿಸುವ ಚೂಪಾದ ಮೊನೆಯುಳ್ಳ ಕಬ್ಬಿಣದ ಲೇಖನಿ12 ಮತ್ತು ‘ಪತ್ರ’ ಅಂದರೆ ತಾಳೆಗರಿ. ಕುಮಾರವ್ಯಾಸನು ವಿದ್ಯಾವಂತನು ಎನ್ನುವವರು “ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ” ಅಂದರೆ ಮೊದಲು ಹಲಗೆಯ ಮೇಲೆ ಬರೆದು ಸರಿಯೋ ತಪ್ಪೋ ಎಂದು ನೋಡಿ, ತಪ್ಪಾದರೆ ತಿದ್ದಿ, ಮತ್ತೆ ತಾಳೆಗರಿಯ ಮೇಲೆ ವರ್ಗಾಯಿಸಲಿಲ್ಲ. ನೇರವಾಗಿ ತಾಳೆಗರಿಯ ಮೇಲೆಯೇ ಬರೆದ ಎನ್ನುತ್ತಾರೆ.

"ಗದುಗಿನ ವೀರನಾರಾಯಣನೇ ಕವಿ ಲಿಪಿಕಾರ ಕುವರವ್ಯಾಸ" ಎಂದು ಮೈಸೂರು ವಿಶ್ವವಿದ್ಯಾಲಯದವರು 1960 - 70 ರ ದಶಕದಲ್ಲಿ ಪ್ರಕಟಿಸಿದ ಪ್ರತಿಯೊಂದರಲ್ಲಿ ಓದಿದ ನೆನಪು, ಆ ಪ್ರತಿ ಈಗ ನನ್ನಲ್ಲಿಲ್ಲ. ಮೇಲೆ ಹೇಳಿದ ಅನೇಕ ಸಂಪುಟಗಳ ಪ್ರತಿಗಳಲ್ಲಿ ಈ ವಾಕ್ಯವು ನನಗೆ ಕಂಡಿಲ್ಲ.

**ಭೀಮನ ಹುಡುಗಾಟ ಮತ್ತು ತುಂಟಾಟ[2]**

ಭೀಮನು ಚಿಕ್ಕಂದಿನಲ್ಲಿ ತುಂಬಾ ತುಂಟನಾಗಿದ್ದ ಮತ್ತು ಕೌರವರನ್ನು ಆಟದ ನೆಪದಲ್ಲಿ ಗೋಳಾಡಿಸುತ್ತಿದ್ದ. ಕುಮಾರವ್ಯಾಸನು ಇದನ್ನು ಹೇಗೆ ಹೇಳಿದ್ದಾನೆಂದು ಚುಟುಕಾಗಿ ನೋಡುವ.

ಇದರೊಳೊಬ್ಬನೆ ಭೀಮನನಿಬರ
ಸೆದೆವ ತಾ ಸೋತೊಡೆ ಝಾಡಿಸಿ
ಕೆದಱುವನು ಗೆದ್ದೋಡಿದರೆ ಬೆಂಬತ್ತಿ ಹಿಡಿದೆಳೆದು |
ಸೆದೆದು ಬಿಡುವನು ಮುನ್ನ ಭೀಷ್ಮಂ
ಗೊದಱೆ ದೂರುವನಿವನು ಮಗುೞೊಂ
ದುದಿನ ಸಂಗಡವಿಹರು ತಾ ವೊಂದಾಗಿ ಮಱುಕೊಳಿಸಿ || 3 || (ಆದಿಪರ್ವ, ಸಂಭವಪರ್ವ, ಸಂಧಿ 13)

ಕೆಣಕಿ ದುರ್ಯೋಧನನನೆತ್ತಿಯ
ಹೆಣೆದು ಹೊಯ್ವನು ನಿಮ್ಮನೂರ್ವವರ
ಬಣಗುಗಳಿಗೆಗೆಡುಗಾಲ ತೊಡರಿದೆ ಬನ್ನಿ ನೀವೆನುತ |
ಗುಣವ ನುಡಿದೊಂದಾಗಿ ಕೆಳಗೊಂ
ಡಣಕಿಸುತ ಮೈಮಱೆಸಿ ಮಱೆಯಲಿ ಕುಣಿದು ಹರಿವನು
ಭೀಮನಾದುರ್ಯೋಧನಾದಿಗಳ || 4 || (ಆದಿಪರ್ವ, ಸಂಭವಪರ್ವ, ಸಂಧಿ 13)

ಇವರಲ್ಲಿ ಭೀಮನೊಬ್ಬನೇ ಎಲ್ಲಾ ಕೌರವರನ್ನು ಸೆದೆದು ಬಡಿಯುವನು, ತಾನು ಸೋತರೆ ಝಾಡಿಸುವನು, ಅವರು ಗೆದ್ದು ಓಡಿದರೆ ಬೆನ್ನಟ್ಟಿ ಹೋಗಿ ಹಿಡಿದೆಳೆವನು, ಅವರಿಗಿಂತ ಮೊದಲೇ ಹೋಗಿ ಭೀಷ್ಮನೊಡನೆ ಕೌರವರನ್ನು ದೂರುವನು, ಕೊನೆಗೊಂದು ದಿನ ಎಲ್ಲರೂ (ಎಲ್ಲವನ್ನೂ ಮರೆತು) ಮೊದಲಿನಂತೆಯೇ ಎಲ್ಲರೂ ಒಂದಾಗಿರುವರು (ಮರುಕೊಳಿಸಿ = ಮೊದಲಿನಂತೆಯೇ10). ದುರ್ಯೋಧನನನ್ನು ಕೆಣಕಿ, ಅವನ ತಲೆಯನ್ನು ತಿರುಚಿ (ಹೆಣೆದು = ತಿರುಚಿ11) ಹೊಡೆಯುವನು. ಬನ್ನಿ, ಕ್ಷುದ್ರರಾದ (ಬಣಗು = ಕೀಳು, ಕ್ಷುದ್ರ, ಲೆಕ್ಕಕ್ಕಿಲ್ಲದ12) ನಿಮಗೆ ಕೆಡುಗಾಲ ಬಂದಿದೆ ಎಂದು ಅವರ ಹೀನ್ಯೆಸಿ (ಗುಣ ನುಡಿದು), ತುಚ್ಛೀಕರಿಸಿ (ಕೆಳಗೊಂಡು = ಕೀಳಾಗಿ ಕಂಡು11), ಅಣಕಿಸುತ್ತಾ, ಮರೆಯಾಗಿ ನಿಂತು, ಕುಣಿದು ಕೌರವರನ್ನು ಬಡೆಯುವನು. ಕೌರವರು ಯುಧಿಷ್ಠಿರನೊಡನೆ, ಅರ್ಜುನನೊಡನೆ ಭೀಮನನ್ನು ತಡೆಯಿರಿ ಎನ್ನುವರು. ಭೀಮನು ಒಪ್ಪಿ ಪುನಃ ವಿನೋದದ ಆಟದಲ್ಲಿ ಕೌರವರನ್ನು ಸೆದೆಯುವನು.

ಅಳುತ ಧೃತರಾಷ್ಟ್ರಂಗೆ ಭೀಮನು
ಕಳೆದ ಹಲುಗಳ ತೋಱಿ ಮೊಳಕಾಲ್
ಗಳಲಿ ಘಾಯವ ನೋಡಿರೈ ನೀವೆಂದು ದೂಱುವರು | 6 ರ ಪೂರ್ವಾರ್ಧ (ಆದಿಪರ್ವ, ಸಂಭವಪರ್ವ, ಸಂಧಿ 13)

ಮುದದಲೊಬ್ಬನೆ ಭೀಮನನಿಬರ
ಸೆದೆವ ತಾ ಸೊಪ್ಪಾಗಿ
ಶತಕರ ತಿದಿಯ ಸುಲಿವನು ಕಾಲಲೊರುಸುವನೊದಱೆ ಮೆಟ್ಟುವನು |
ಬದಿಯ ತಿವಿವನು ಬೀೞಲೊದೆವನು
ಮೊದಲೆ ತಾನೈತಂದು ಭೀಷ್ಮಂ
ಗೊದಱೆ ದೂಱುವ ಕೌರವೇಂದ್ರನ ಧುರಕೆ ಸೆಣಸುವನು || 8 || (ಆದಿಪರ್ವ, ಸಂಭವಪರ್ವ, ಸಂಧಿ 13)

ಮುಳ್ಳುಮೊನೆಯಲಿ ಚಿಗುರಿ ನೆತ್ತರ
ಚೆಲ್ಲಿ ಹುಡಿಯಲಿ ಹೊರಳಿ ತಾ ಬಂ
ದಲ್ಲಿ ಧೃತರಾಷ್ಟ್ರಂಗೆ ಭೀಷ್ಮಂಗಳುತ ದೂಱುವನು |
ಒಲ್ಲೆನೆಂದೊಡೆ ನನ್ನ ಕರೆವರು
ಖುಲ್ಲರೆಲ್ಲರು ನಿಮ್ಮ ಮಕ್ಕಳಿ ಗೆಲ್ಲರಿಗೆ
ನಾನೊಬ್ಬನಾದೆನೆಯೆಂದನನಿಲಜನು || 9 || (ಆದಿಪರ್ವ, ಸಂಭವಪರ್ವ, ಸಂಧಿ 13)

ಕೌರವರು ಭೀಮನು ಬೀಳಿಸಿದ ಹಲ್ಲುಗಳನ್ನು, ಮೊಳಕಾಲುಗಳಿಗಾದ ಗಾಯವನ್ನು ಧೃತರಾಷ್ಟ್ರನಿಗೆ ತೋರಿಸಿ ದೂರುವರು. ಭೀಮನೊಬ್ಬನೇ ಚೆನ್ನಾಗಿ ನೂರು ಕೌರವರ ಉಸಿರುಗಟ್ಟಿಸುವನು (ತಿದಿ = ಶ್ವಾಸ ಎಂದು ಅರ್ಥಮಾಡಬೇಕು, ಸುಲಿ = to plunder, rob, loot11). ಕಾಲಿನಿಂದ ಮೆಟ್ಟುವನು, ಕಿಬ್ಬದಿಯನ್ನು ತಿವಿಯುವನು, ಕೆಳಗೆ ಬೀಳಲು ಒದೆಯುವನು, ಕೌರವರಿಗಿಂತ ಮೊದಲೇ ಹೋಗಿ ದೂರು ಕೊಟ್ಟು

ಮತ್ತೆ ದುರ್ಯೋಧನನೊಡನೆ ಕಾಳಗಕ್ಕೆ ನೆಪವನ್ನು ಹುಡುಕುವನು (ಧುರಕೆ ಸೆಣಸುವನು). ಮುಳ್ಳುಗಳಿಂದ ಪರಚಿಸಿ, ನೆತ್ತರು ಸುರಿಸಿ, ಧೂಳಲ್ಲಿ ಹೊರಳಾಡಿ, ತಾನು ಒಲ್ಲೆನೆಂದರೂ ದುಷ್ಟರು ತನ್ನನ್ನು (ಆಟಕ್ಕೆ) ಕರೆಯುವರು. ನಿಮ್ಮ ಮಕ್ಕಳಿಗೆ ತಾನೊಬ್ಬ ಶತ್ರುವಾದೆನೇ ಎಂದು ಧೃತರಾಷ್ಟ್ರ, ಭೀಷ್ಮರನ್ನು ಕೇಳುವನು.

ಮರನ ಹಿಡಿದಲುಗಿದೊಡೆ ಬಿದ್ದರು
ಭರತಕುಲಪಾಲಕರು ನೂರ್ವರು
ವರಮಹಾವಾತದಲಿ ತರುಫಲನಿಕರ ಬೀೞ್ವಂತೆ |
ಶಿರವೊಡೆದು ಯೆದೆನೊಂದು ಮೊಳಕಾ
ಲ್ಮುಱಿದು ಕೈಗಳು ಮುಱಿದು ನೆತ್ತರು
ಸುಱಿಯೆ ಧೃತರಾಷ್ಟ್ರಂಗೆ ತೋಱಿದರಳುತ ಘಾಯವನು || 14 || (ಆದಿಪರ್ವ, ಸಂಭವಪರ್ವ, ಸಂಧಿ 13)
ದುರುಳರೆಲವೋ ನೀವು ಭೀಮನ
ಪರಿಯ ಬಲ್ಲಿರೆ ಜಗಳ ಬೇಡೆಂ
ದರಸ ಬೈದನು ತನ್ನ ಮಕ್ಕಳ ನೋಡಿ ಖಾತಿಯಲಿ |
ಹಿರಿದು ಹೆಚ್ಚಿತು ವೈರ ಭೀಮಗೆ
ಕುರುಕುಲಾಧಿಪರೊಳಗೆ ಬಾಲ್ಯದ
ಭರದ ಮೊದಲಲಿ ಕೇಳು ಜನಮೇಜಯಮಹೀಪಾಲ || 15 || (ಆದಿಪರ್ವ, ಸಂಭವಪರ್ವ, ಸಂಧಿ 13)

ಒಮ್ಮೆ ಕೌರವರು ಆಟಕ್ಕಾಗಿ ಮರವನ್ನೇರಿದರು. ಭೀಮನು ಆ ಮರವನ್ನು ಹಿಡಿದು ಅಲುಗಿಸಿದಾಗ ಬಿರುಗಾಳಿಗೆ ಮರದಿಂದ ಫಲಗಳು ಉದುರುವಂತೆ ನೂರು ಮಂದಿ ಭರತ ವಂಶೋದ್ಧಾರಕರೂ ಕೆಳಗೆ ಬಿದ್ದರು. ಒಡೆದ ತಲೆ, ನೊಂದ ಎದೆ, ಮುರಿದ ಕೈಕಾಲುಗಳಿಂದ ಸುರಿವ ನೆತ್ತರನ್ನು ಅಳುತ್ತಾ ಧೃತರಾಷ್ಟ್ರನಿಗೆ ತೋರಿಸಿದರು. ಧೃತರಾಷ್ಟ್ರನು ಸಿಟ್ಟಾಗಿ ಮಕ್ಕಳಿಗೆ “ಮೂರ್ಖರು ನೀವು, ಭೀಮನ ನಡವಳಿಕೆ ನಿಮಗೆ ತಿಳಿದಿದೆ, ಅವನೊಡನೆ ಜಗಳ ಬೇಡ” ಎಂದು ಹೇಳಿದನು. ಹೀಗೆ ಭೀಮ ಮತ್ತು ಕೌರವರ ನಡುವೆ ವೈರವು ಬಾಲ್ಯದಿಂದಲೇ ತೊಡಗಿ ಬೆಳೆಯುತ್ತಾ ಹೋಯಿತು. ಬಹಳ ಸುಂದರವಾಗಿ ಹಾಸ್ಯವನ್ನು ಕೂಡಿಕೊಂಡು ಕುಮಾರವ್ಯಾಸನು ಭೀಮನ ಹುಡುಗಾಟಿಕೆಯನ್ನು ವಿವರಿಸಿದ್ದಾನೆ.

### ದ್ರೌಪದಿ ಸ್ವಯಂವರ[3]

ಲಾಕ್ಷಾಗೃಹ ದಹನ ಮತ್ತು ಬಕಾಸುರನ ವಧೆಯ ನಂತರ ತಲೆಮರೆಸಿ ಬ್ರಾಹ್ಮಣರ ವೇಷದಲ್ಲಿ ತಿರುಗಾಡುತ್ತಿದ್ದ ಪಾಂಡವರು ದ್ರೌಪದಿ ಸ್ವಯಂವರ ಮಂಟಪಕ್ಕೆ ಹೋಗಿ ಬ್ರಾಹ್ಮಣರ ಗುಂಪಿನಲ್ಲಿ ಕುಳಿತರು. ರಾಜಮಹಾರಾಜರುಗಳು ಮತ್ಸ್ಯಯಂತ್ರವನ್ನು ಭೇದಿಸಲು ಸೋತು ಬಿಟ್ಟರು. ಯುಧಿಷ್ಠಿರನು ತಮ್ಮನನ್ನು ನೋಡಿ ಸನ್ನೆಮಾಡಿದಾಗ ಅರ್ಜುನನು ಮನಸ್ಸಿನಲ್ಲೇ ಯುಧಿಷ್ಠಿರ, ಕುಂತಿ ಮತ್ತು ಭೀಮರನ್ನು ನಮಸ್ಕರಿಸಿ, ಕೂತಿದ್ದ ಎಲ್ಲಾ ಬ್ರಾಹ್ಮಣರನ್ನು ನೋಡಿ, ಧೋತ್ರ, ಧರ್ಬೆಗಳನ್ನೂ ಸರಿಪಡಿಸುತ್ತಾ, ಮೆಲ್ಲನೆ ಎದ್ದನು. ಅವನನ್ನು ನೋಡಿ ಎಲ್ಲಾ ರಾಜರೂ, ಬ್ರಾಹ್ಮಣರೂ ಅಪಹಾಸ್ಯಮಾಡಿ ನಕ್ಕರು.

ನೋಡಿದನು ತಮ್ಮನನು ಸನ್ನೆಯ
ಮಾಡಿದೊಡೆ ಕೈಕೊಂಡನವನಿಪ
ಕೂಡಿ ಕುಂತಿಗೆ ಭೀಮಸೇನಂಗೆರಗಿ ಮನಸಿನಲಿ |
ಕೂಡೆ ಕುಳ್ಳಿರ್ದಖಿಳ ವಿಪ್ರರ
ನೋಡಿ ಮೆಲ್ಲನೆ ಧೋತ್ರದರ್ಭೆಯ
ಗೂಡಸಂವರಿಸುತ್ತ ಸಭೆಯಲಿ ನಿಂದನಾಪಾರ್ಥ || 10 || (ಆದಿ ಪರ್ವ, ಭಾಗ 2, ಸಂಧಿ 31)
ಏನು ಗಡ್ಡದುಪಾಧ್ಯರೆದ್ದಿರಿ
ದೇನು ಧನುವಿಂಗಲ್ಲಲೇ ಅ
ದೇನು ಮನದಂಘವಣೆ ಬಯಸಿದಿರೇ ನಿತಂಬಿನಿಯ |
ವೈನತೇಯನವಗಡಿಸಿದ ವಿಷ
ವೇನು ಸದರವೊ ಹಾವಡಿಗರಿಗಿ
ದೇನು ನಿಮ್ಮುತ್ಸಾಹವೆಂದುದು ವಿಪ್ರಜನ ನಗುತ || 11 || (ಆದಿ ಪರ್ವ, ಭಾಗ 2, ಸಂಧಿ 31)

"ಗಡ್ಡದ ಭಟ್ಟರೇ, ಏಕೆ ಎದ್ದಿರಿ? ಧನುಸ್ಸಿಗೆ ಅಲ್ಲವಲ್ಲ? ನಿಮ್ಮ ಆಸೆಯೇನು? ಸುಂದರಿಯನ್ನು ಬಯಸಿದಿರೇ? ಗರುಡನಿಗೇ ಹಾನಿಮಾಡಿದ ವಿಷವು ಹಾವಾಡಿಗರಿಗೆ ಒಗ್ಗುವುದೇ? ಏನು ನಿಮ್ಮ ಉತ್ಸಾಹ!" ಎಂದು ಬ್ರಾಹ್ಮಣರು ನಕ್ಕರು.

ತಿರುಗಿ ಕಂಡರು ಸಕಲಭೂಮೀ
ಶ್ವರರು ಗಹಗಹಿಸಿದರಿದೆನರೇ
ಮರುಳೊ ಜಡನೋ ವಿಪ್ರವೇಷಚ್ಛನ್ನ ಸುರಪತಿಯೊ |
ಮರುಳುಗಳು ತಾವಕಟ ಮದನನ
ಸರಳ ಮರುಮೊನೆಗಾರಂತಃ
ಕರಣ ನೆರೆ ಕಳವಳಿಸದೆಂದರು ನೃಪರು ತಮತಮಗೆ || 17 || (ಆದಿ ಪರ್ವ, ಭಾಗ 2, ಸಂಧಿ 31)

ಎಲ್ಲಾ ರಾಜರುಗಳು ಎದ್ದ ಅರ್ಜುನನನ್ನು ಕಂಡು ಗಹಗಹಿಸಿ ನಕ್ಕರು. "ಇವನೇನು ಮರುಳನೋ, ಮಂದಮತಿಯೋ, ಬ್ರಾಹ್ಮಣ ವೇಷದ ಇಂದ್ರನೋ, ನಾವೆಲ್ಲ ಹುಚ್ಚರು, ಕಾಮನ ಬಾಣವು ಯಾರ ಮನಸ್ಸನ್ನು ಕಳವಳಿಸದು?" ಎಂದು ತಮ್ಮೊಳಗೆ ಆಡಿಕೊಂಡರು.

ಇತ್ತ ನೋಡೌ ತಾಯೆ ಹಾರುವ
ರ‍್ಅತ ಗಡ್ಡದುಪಾಧ್ಯರನು ತಾ

ವೆತ್ತುವರು ಗಡ ಧನುವನೆಸೆವರು ಗಡ ತಿಮಿಂಗಿಳನ |
ಹೊತ್ತುಗಳೆವರೆ ಲೇಸು ಬಳಿಕಿ
ನ್ನುತ್ತಮವರೀವಿಪ್ರರೆನೆ ತಲೆ
ಗುತ್ತಿ ನಾಚಿದಳುಂಗುಟದಲೌಂಕುತ ಮಹೀತಳವ || 21 ||
(ಆದಿ ಪರ್ವ, ಭಾಗ 2, ಸಂಧಿ 31)

"ಇಲ್ಲಿ ನೋಡಮ್ಮ, ಬ್ರಾಹ್ಮಣರನ್ನು, ಅಲ್ಲಿ ಗಡ್ಡದ ಭಟ್ಟರನ್ನು, ಅವರು ಶ್ರೇಷ್ಠವಾದ ಧನುಸ್ಸನ್ನೆತ್ತುವರು, ಮೀನಿಗೆ ಗುರಿಯಿಟ್ಟು ಹೊಡೆಯುವರು, ಇನ್ನು ಬ್ರಾಹ್ಮಣರೇ ಶ್ರೇಷ್ಟರಲ್ಲ?" (ಎಂದು ದ್ರೌಪದಿಯ ಸಖಿಯರು) ಅಂದಾಗ, ಅವಳು ತಲೆತಗ್ಗಿಸಿ, ನಾಚಿ, ಕಾಲಿನ ಉಂಗುಷ್ಟದಿಂದ ನೆಲವನ್ನು ಕೆರೆದಳು.

**ಭೀಮ – ಆಂಜನೇಯ [4]**

ತಾನು ಅತಿಶಕ್ತಿಶಾಲಿ ಎಂಬ ಭೀಮನ ಗರ್ವವನ್ನು ಹನುಮಂತನು ಹೇಗೆ ಭಂಗಪಡಿಸಿದನೆಂದು ಕುಮಾರವ್ಯಾಸನ ಮಾತಿನಲ್ಲೇ ನೋಡಿ. ಪಾಂಡವರು ಅರಣ್ಯವಾಸದಲ್ಲಿದ್ದಾಗ ಸೌಗಂಧಿಕಾ ಪುಷ್ಪವನ್ನು ತಂದು ಕೊಡಬೇಕೆಂದು ದ್ರೌಪದಿಯು ಭೀಮನೊಡನೆ ಕೇಳಿಕೊಂಡಳು. ಆ ಹೂವನ್ನರಸುತ್ತಾ ಭೀಮನು ಕಾಡಿನಲ್ಲಿ ಅಲೆಯುತ್ತಿದ್ದನು. ಅವನ ನಡಿಗೆಯ ರಭಸಕ್ಕೆ ಮರಗಳಲೆಲ್ಲಾ ಮುರಿದು ಬೀಳುತ್ತಿದ್ದವು. ಅದೇ ದಾರಿಯಲ್ಲಿ ರಾಮಧ್ಯಾನ ಮಾಡುತ್ತ ಹನುಮಂತನು ಕುಳಿತಿದ್ದನು.

ನಿಱಿನಿಱಿಲುನಿಱಿಲೆನುತ ಹೆಮ್ಮರ
ಮುಱಿದುದಾತನ ರೋಮ ಸೋಂಕಿನ
ಲಿಱಿಕಿಲಾದುದು ಧರಣಿಯಲನಿಜ ಮುಱಿದ ಮಗ್ಗುಲಲಿ |
ಉಱುವಬಾಲವ ಬೆಳಸಿ ದಾರಿಯ
ತೆಱುಹುಗೊಡದೆಡೆಯೊಡ್ಡಿ ಮನುಜನ
ಮುಱುಕವನು ತಾ ಕಾಂಬೆನಿನ್ನೆನುತಿರ್ದನಾಹನುಮ || 14 || (ಅರಣ್ಯಪರ್ವ, ತೀರ್ಥಯಾತ್ರಾ ಪರ್ವ, ಸಂಧಿ 11)

ನಿರಿಲ್ ನಿರಿಲ್ ಎಂದು ಆತನ ರೋಮದ ಸೋಂಕಿನಿಂದ ಮರಗಳು ಮುರಿದು ಬಿದ್ದುದರಿಂದ ಹಾದಿಯಲ್ಲಿ ಇಕ್ಕಟ್ಟಾಯಿತು. ಮುರಿದ ಮರಗಳ ಮಗ್ಗುಲಲ್ಲಿ ತನ್ನ ಬಾಲವನ್ನು ಬೆಳೆಸಿ ದಾರಿಗಟ್ಟವಿಟ್ಟು ಈ ಮನುಷ್ಯನ ಮುರುಕತನವನ್ನು ನೋಡುತ್ತೇನೆ ಎಂದುಕೊಂಡ ಹನುಮ. (ಇಱಿಕಿಲು = ಇಕ್ಕಟ್ಟು11, ಮುಱುಕತನ = breaking, ruining capacity11)

ಬರವಿದೆಲ್ಲಿಗೆ ಮರ್ತ್ಯನೋ ಖೇ
ಚರನೊ ದೈತ್ಯನೊ ದಿವಿಜನೋ ಕಿ
ನ್ನರನೊ ನೀನಾರೆಂದು ಭೀಮನ ನುಡಿಸಿದನು ಹನುಮ || 15 ರ ಎರಡನೇ ಭಾಗ || (ಅರಣ್ಯಪರ್ವ, ತೀರ್ಥಯಾತ್ರಾ ಪರ್ವ, ಸಂಧಿ 11)

“ಎಲ್ಲಿಂದ ಬರೋಣವಾಯಿತು, ನೀನು ಮನುಷ್ಯನೋ, ಖೇಚರನೋ, ರಕ್ಕಸನೋ, ದೇವತೆಯೋ ಅಥವಾ ಕಿನ್ನರನೋ, ನೀನಾರು?” ಎಂದು ಭೀಮನನ್ನು ಹನುಮನು ವಿಚಾರಿಸಿದನು. ಭೀಮನು ತಾನು ಮಾನವನೆಂದೂ, ತನ್ನ ಪತ್ನಿಯು ಇಚ್ಛಿಸಿದಂತೆ ಸೌಗಂಧಿಕಾ ಪುಷ್ಪವನ್ನು ತರಲು ಹೊರಟಿದ್ದೇನೆಂದು ಹೇಳಿದನು. ಆದರೆ ದಾರಿಯ ಬದಿಯಲ್ಲಿ ಕೂತಿದ್ದ ಹನುಮಂತನ ಬಾಲವು ಅವನ ದಾರಿಯನ್ನು ಅಡ್ಡಗಟ್ಟಿತು. ಇನ್ನೊಬ್ಬರ ಶರೀರದ ಮೇಲೆ ಅಥವಾ ಶರೀರದ ಭಾಗದ ಮೇಲೆ ದಾಟಿಹೋಗುವುದು ಶಿಷ್ಟಾಚಾರವಲ್ಲ. ಅಡ್ಡವಾಗಿದ್ದ ಬಾಲವನ್ನು ತೆಗೆಯದ ಕಪಿಯ ನಡತೆಯಿಂದ ಭೀಮನಿಗೆ ಸಿಟ್ಟು ಬಂತು. "ನಿನ್ನ ಬಾಲವನ್ನು ಆಚೆಗೆ ತೆಗೆದುಕೋ" ಎಂದು ಗರ್ಜಿಸಿದನು. ಅವನು ಆಂಜನೇಯನೆಂಬ ವಿಚಾರ ಭೀಮನಿಗೆ ತಿಳಿದಿರಲಿಲ್ಲ. ಅಶ್ವತ್ಥಾಮನಂತೆ ಹನುಮಂತನೂ ಚಿರಂಜೀವಿ.

ಗದೆಯ ಮೊನೆಯಲಿ ನೂಕಿದನು ರೋ
ಮದಲಿ ಚಲಿಸದ ಬಾಲ ನೋಡಿದ
ನಿದು ವಿಚಿತ್ರವಲಾ ಯೆನುತ ನುಡಿಸಿದನು ಕಪಿವರನ |
ಒಡೆದುವದ್ರಿಗಳಳಿವನೆನ್ನಂ
ಗದಲಿ ತಾ ಬಲ್ಲಿದನು ಬಾಲದ
ಕದವ ತೆಗೆ ಬಟ್ಟೆಯಲ್ಲೆನುತಾ ಗರ್ಜಿಸಿದನಾ ಭೀಮ || 17 ||
(ಅರಣ್ಯಪರ್ವ, ತೀರ್ಥಯಾತ್ರಾ ಪರ್ವ, ಸಂಧಿ 11)

(ಬಾಲವನ್ನು) ಗದೆಯ ತುದಿಯಿಂದ ತಳ್ಳಲು ನೋಡಿದನು, ಅದರ ರೋಮವೂ ಮಿಸುಕಲಿಲ್ಲ, ಇದನ್ನು ನೋಡಿದ (ಭೀಮನು) “ಇದು ಆಶ್ಚರ್ಯವಲ್ಲಾ” ಎಂದುಕೊಂಡು, “ನಾನು ಶಕ್ತಿವಂತನು, ನನ್ನ ರೀತಿಗೆ ಪರ್ವತಗಳು ಒಡೆದು ಅಳಿಯುತ್ತವೆ, ಅಡ್ಡವಿಟ್ಟ ಬಾಲವನ್ನು ತೆಗೆ” ಎಂದು ಕಪಿಯ ಮುಂದೆ ಘರ್ಜಿಸಿದನು. (ಅಂಗ = way, manner 11).

ನೀವು ಬಲ್ಲಿದರಿದಕೆ ಸಂಶಯ
ವಾವುದಲ್ಲದೊಡೀಮರದ್ವಿಭ
ವೀವಿಹಗಕುಲವೀಮೃಗವ್ರಜವಂಜುವುವೆ ನಿಮಗೆ |
ಆವು ವೃದ್ಧರು ಎಮ್ಮ ಬಾಲವ
ನಾವು ಹದುಳಿಸಲಾರೆವೀಗಳು
ನೀವು ತೊಲಗಿಸಿ ಬಿಜಯಮಾಡುವುದೆಂದನಾಹನುಮ || 18 || (ಅರಣ್ಯ ಪರ್ವ, ಸಂಧಿ 11)

"ನೀವು ಬಲಶಾಲಿಗಳು, ಇದಕ್ಕೆ ಸಂಶಯವಿಲ್ಲ. ಇಲ್ಲದಿದ್ದರೆ ಈ ಮರಗಿಡಗಳು, ಮೃಗಪಕ್ಷಿಗಳು ನಿಮಗೇಕೆ ಅಂಜುತ್ತವೆ? ನಾವು ಮುದುಕರು, ನಮ್ಮ ಬಾಲವನ್ನೇ ನಾವು ಹಂದಾಡಿಸಲಾರೆವು. ನೀವೇ ಅದನ್ನು ಬದಿಗಿರಿಸಿ, ದಯಮಾಡಿಸಿ" ಎಂದು ಹನುಮಂತನಂದ.

ಐಸಲೇ ತಪ್ಪೇನೆನುತ ತನ
ಗೇಸು ಬಲವುಂಟೈಸರಲಿ ಕ
ಟ್ಟಾಸುರದಲೌಕಿದನು ಬಾಲವನೊದರಿ ಬೊಬ್ಬಿರಿದು |
ಗಾಸಿಯಾದನು ಪವನಸುತನೆ
ಳ್ಳೈಸು ಮಿಸುಕದು ಬಾಲವೂರ್ಧ್ವ
ಶ್ವಾಸಲಹರಿಯಲಡಿಗಡಿಗೆ ಲಟಕಟಿಸಿದನು ಭೀಮ || 19 ||
(ಅರಣ್ಯ ಪರ್ವ, ಸಂಧಿ 11)

"ಅಷ್ಟೇನೆ, ಅದರಲ್ಲೇನು ತಪ್ಪು?" ಎನ್ನುತ್ತಾ ತನಗೆಷ್ಟು ಬಲವುಂಟು ಅಷ್ಟನ್ನೂ ಉಪಯೋಗಿಸಿ, ಬೊಬ್ಬಿರಿದು ಬಾಲವನ್ನು ಅಲುಗಾಡಿಸಲು ಯತ್ನಿಸಿದನು. ಪವನಪುತ್ರನು ಸೋತನು. ಬಾಲವು ಎಳ್ಳಷ್ಟೂ ಮಿಸುಕಲಿಲ್ಲ. ಉಸಿರುಗಟ್ಟಿ, ಧಾವರಿಸಿ, ಭೀಮನು ಸುಸ್ತಾಗಿ ಹೋದನು. ಆಗ ಅವನು ಹನುಮನನ್ನು, "ಅಯ್ಯಾ, ನೀವು ಯಾರು?" ಎಂದು ಕೇಳಿದನು.

ನಾವು ಹಿಂದಣ ಯುಗದ ರಾಘವ
ದೇವನೋಲೆಯಕಾರರಾಸು
ಗ್ರೀವಮಿತ್ರರು ಪವನನಿಂದಂಜನೆಗೆ ಜನಿಸಿದೆವು |
ನಾವು ನಿಮ್ಮೊಡಹುಟ್ಟಿದವರು ಸಂ
ಭಾವಿಸಿತು ನಮ್ಮಿಷ್ಟವೆನೆ ನಗು
ತಾವೃಕೋದರನೆರಗಿದನು ಕಲಿಹನುಮನಂಘ್ರಿಯಲಿ || 23 || (ಅರಣ್ಯ ಪರ್ವ, ಸಂಧಿ 11)

"ನಾನು ಹಿಂದಿನ ಯುಗದ (ತ್ರೇತಾಯುಗ, ಮಹಾಭಾರತದ ಕಾಲದಲ್ಲಿ ದ್ವಾಪರಯುಗ) ರಾಮನ ಸೇವಕನು, ಸುಗ್ರೀವನ ಸ್ನೇಹಿತನು, ಮಾರುತ ಮತ್ತು ಅಂಜನಾ ದೇವಿಯ ಪುತ್ರ" ಎಂದಾಗ ಭೀಮನು ಸಂತೋಷದಿಂದ, "ನೀವು ನನ್ನ ಸಹೋದರರು, ನನ್ನ ಇಷ್ಟವು ಇಂದು ಫಲಿಸಿತು" ಎಂದು ಹನುಮಂತನ ಕಾಲುಗಳಿಗೆರಗಿದನು.
ಆನಂತರ ಅರ್ಜುನನ ರಥದ ಧ್ವಜವನ್ನು ಹನುಮಂತನು ಅಲಂಕರಿಸಬೇಕೆಂದು ಭೀಮನು ಬೇಡಿಕೊಂಡಾಗ ಅವನೊಪ್ಪಿದನು. ಪ್ರತಿ ವೀರನ ರಥದ ಮೇಲೆ ಒಂದು ಧ್ವಜವಿರುತ್ತದೆ, ಅದರ ಮೇಲಿನ ಚಿತ್ರವನ್ನು ನೋಡಿ ಆ ರಥದಲ್ಲಿ ಯಾರಿದ್ದಾರೆ ಎಂದು ರಣಭೂಮಿಯಲ್ಲಿ ಕಂಡುಕೊಳ್ಳುತ್ತಾರೆ. ಅರ್ಜುನನು ಕಪಿಧ್ವಜ, ಕರ್ಣನು ಸೂರ್ಯ ಪತಾಕ, ದುರ್ಯೋಧನನು ಉರಗ ಪತಾಕ ಇತ್ಯಾದಿ.

**ಪಾಂಡವರ ಕುಟೀರಕ್ಕೆ ದೂರ್ವಾಸರ ಆಗಮನ4**

ದೂರ್ವಾಸ ಮುನಿಯೊಮ್ಮೆ ದುರ್ಯೋಧನನ ಸತ್ಕಾರದಿಂದ ಸಂಪ್ರೀತನಾಗಿ ದುರ್ಯೋಧನನಿಗೆ ನಿನಗಿಷ್ಟ ಬಂದ ವರ ಕೇಳು ಅಂದಾಗ ಅವನು ಏನನ್ನೂ ಕೇಳಬಹುದಿತ್ತು. ಆದರೆ ಸದಾ ಪಾಂಡವರ ಕೆಡುಕನ್ನೇ ಬಯಸುತ್ತಿದ್ದ ಆತ, "ದ್ರೌಪದಿಯು ಊಟ ಮುಗಿಸಿ ಅಕ್ಷಯಪಾತ್ರೆಯನ್ನು ತೊಳೆದಿಟ್ಟ ನಂತರ ತಾವು ಶಿಷ್ಯರೊಂದಿಗೆ ಪಾಂಡವರ ಕುಟೀರಕ್ಕೆ ಹೋಗಿ ಭೋಜನವನ್ನು ಕೇಳಬೇಕು" ಎಂದು ಬೇಡಿಕೊಂಡನು. ದ್ರೌಪದಿಯ ಬಳಿಯಿದ್ದ ಅಕ್ಷಯಪಾತ್ರೆಯು ಆಕೆ ಕೇಳಿದ ಭಕ್ಷ್ಯಗಳನ್ನು ಕೇಳಿದಷ್ಟು ಪ್ರಮಾಣದಲ್ಲಿ ಕೊಡುವ ಶಕ್ತಿಯುಳ್ಳ ಪಾತ್ರೆ. ಆದರೆ ಆಕೆಯು ಊಟ ಮುಗಿಸಿ ಅದನ್ನು ತೊಳೆದ ನಂತರ ಮುಂದಿನ ಭೋಜನದ ಸಮಯದ ತನಕ ಅದು ಏನನ್ನೂ ಕೊಡಲಾರದು. ಪಾಂಡವರು ಊಟ ಕೊಡಲಾಗದೆ ಹೋದರೆ ಮುಂಗೋಪಿ ದೂರ್ವಾಸನು ಅವರಿಗೆ ಶಾಪವನ್ನು ಕೊಡುವನೆಂದು ದುರ್ಯೋಧನನ ದುರಾಲೋಚನೆ. ಕೊಟ್ಟ ಮಾತಿನಂತೆ ದೂರ್ವಾಸನು ಸಮಯಕಾದು ಪಾಂಡವರಲ್ಲಿ ಹೋಗಿ, ಊಟದ ಭಿಕ್ಷೆಯನ್ನು ಬೇಡಿ, ಶಿಷ್ಯರೊಡನೆ ನದಿಗೆ ಸ್ನಾನಕ್ಕೆ ಹೋದನು. ಈ ಸಂಧಿಗ್ದ ಪರಿಸ್ಥಿತಿಯಲ್ಲಿ ದ್ರೌಪದಿಯು ಕೃಷ್ಣನಿಗೆ ಮೊರೆ ಹೋಗುವುದನ್ನು ಬಿಟ್ಟು ಮತ್ತೇನು ಮಾಡಬಲ್ಲಳು?

ಧ್ಯಾನ ಗೋಚರನಾಗಿ ವನಿತೆಯ
ಮಾನಸಲಿದಹ ಪರಮಹಂಸನು
ಮಾನವಾಕೃತಿಯಾಗಿ ತೋಱಿದ ಬಾಹ್ಯರಚನೆಯಲಿ |
ಮಾನಿನಿಯ ಮೈದಡಹಿ ಚಿಂತೆಯ
ದೇನು ತಂಗಿ ಲತಾಂಗಿ ಹೇಳೌ
ಮೌನಮುದ್ರೆಯದೇನೆನಲು ಕಂದೆಱೆದಳಿಂದುಮುಖಿ || 34 || (ಅರಣ್ಯಪರ್ವ, ದ್ರೌಪದಿ ಸತ್ಯಭಾಮಾ ಸಂವಾದಪರ್ವ, ಸಂಧಿ 17)

ಧರಣಿಯನು ಬಿಡದಳೆದು ಹೆಚ್ಚಿದ
ಚರಣವಿದು ಕಾಳಿಂಗಮರ್ದನ
ಚರಣವಿದು ಹರಳಾದ ಅಹಲ್ಯೆಯ ಶಾಪಹರಣವಿದು |
ಚರಣವಿದು ಸುರನದಿಯ ಸೃಜಿಸಿದ
ಚರಣವಿದು ಶಕಟಪ್ರಭಂಜನ
ಚರಣವಿದು ಯೆನುತ ಕೊಂಡಾಡಿದಳು ಹರಿಪದವ || 36 || (ಅರಣ್ಯಪರ್ವ, ದ್ರೌಪದಿ ಸತ್ಯಭಾಮಾ ಸಂವಾದಪರ್ವ, ಸಂಧಿ 17)

ದ್ರೌಪದಿಯು ಮನದಲ್ಲೇ ಕಾಣುತ್ತಿದ್ದ ಪರಮಾತ್ಮನು ಮಾನವ ರೂಪದಲ್ಲಿ ಕಣ್ಣುಗಳಿಗೆ ಗೋಚರನಾಗಿ ಬಂದು ಆಕೆಯ ಮೈದಡವಿ, ಎಬ್ಬಿಸಿ "ಹೇಳು ತಂಗಿ, ಏಕೆ ಮೌನವಾಗಿದ್ದಿ?" ಎಂದು ಕೇಳಿದಾಗ ಅವಳು ಕಣ್ದೆರೆದಳು. ನಂತರ ಕೃಷ್ಣನನ್ನು ಕಂಡ ಸಂತೋಷದಲ್ಲಿ ಆನಂದಾಶ್ರುಗಳನ್ನು ಸುರಿಸಿ ಭಾವುಕಳಾಗಿ, ಪಾದಕ್ಕೆರಗಿ ಆ ಪಾದಗಳನ್ನು ಸ್ತುತಿಸಿದಳು. "ಭೂಮಿಯ ಅಳತೆಯನ್ನು ಮೀರಿದ,

ಕಾಳಿಂಗನನ್ನು ಮರ್ದಿಸಿದ, ಕಲ್ಲಾದ ಅಹಲ್ಯೆಯ ಶಾಪವನ್ನು ವಿಮೋಚಿಸಿದ, ಗಂಗೆಯನ್ನು ಸೃಷ್ಟಿಸಿದ (ಸೃಜ ಎಂದರೆ ಸುರಿಸು ಎಂಬ ಅರ್ಥವೂ ಇದೆ13), ಶಕಟಾಸುರನನ್ನು ವಧಿಸಿದ ಪಾದಗಳಿವು" ಎಂದು ಕೊಂಡಾಡಿದಳು. ದೂರ್ವಾಸ ಮತ್ತು ಶಿಷ್ಯರಿಗೆ ಊಟನೀಡುವ ಪರಿಹೇಳು, ತನ್ನಲ್ಲಿ ಏನೂ ಉಳಿದಿಲ್ಲ ಎಂದಾಗ ತಾನೂ ಹಸಿದಿದ್ದೇನೆ, ತನಗೆ ಊಟ ಕೊಡದೆ ಇತರರ ಬಗ್ಗೆ ದೂರುಹೇಳುತ್ತಿ ಎಂದು ಕೃಷ್ಣ ಹೇಳಿದಾಗ ದ್ರೌಪದಿಯು ಕೈ ಮುಗಿದಳು.

ನಾವು ಹಸಿದ್ಯೆತಂದೊಡೀಪರಿ
ದೇವಿ ನಾನಾದೂಱ ದೂಱುವು
ದಾವುದುಚಿತವು ಹೇಳೆನಲು ನಡುನಡುಗಿ ಕೈಮುಗಿದು | 39
(ಅರಣ್ಯಪರ್ವ, ದ್ರೌಪದಿ ಸತ್ಯಭಾಮಾ ಸಂವಾದಪರ್ವ, ಸಂಧಿ 17)

"ನಿನ್ನಲ್ಲಿ ಏನೂ ಇಲ್ಲದಿದ್ದರೂ ಅಡ್ಡಿ ಇಲ್ಲ, ತೊಳೆದಿಟ್ಟ ಆ ಪಾತ್ರೆಯನ್ನೇ ತಾ" ಎಂದು ಅದನ್ನು ತರಿಸಿದ ಕೃಷ್ಣ. ಅದಕ್ಕೆ ಅಂಟಿಕೊಂಡಿದ್ದ ಅನ್ನದ ಅಗುಳನ್ನು ತೆಗೆದು, ಚಪ್ಪರಿಸಿ ತಿಂದು ತೇಗಿದ.

ಕಂಡು ಕಿಂಚಿತ್ಶಾಕಶೇಷವ
ಪುಂಡರೀಕಾಂಬನದನು ಕೈ
ಕೊಂಡು ತಾನದನುಂಡು ತಲೆದೂಗಿದನು ತೇಗಿದನು | 41
(ಅರಣ್ಯಪರ್ವ, ದ್ರೌಪದಿ ಸತ್ಯಭಾಮಾ ಸಂವಾದಪರ್ವ, ಸಂಧಿ 17)

ಅರಸ ಕೇಳೀಚೆಯಲಿ ಮದದು
ಬ್ಬಸದ ತನುವಿನ ತಳಿತರೋಮೋ
ತ್ಕರದ ಹೃಷ್ಟಿಯ ಬಳ್ಳಿದೇಗಿನ ಹಿಗ್ಗುವಳ್ಳೆಗಳ |
ಕೊರಟೆಗಡರಿದ ಹೊಟ್ಟೆಗಳ
ಋಷಿ ವರರು ಸಹದೂರ್ವಾಸಮುನಿಯಾ
ಸರಸಿಜಾಕ್ಷನ ಬರವ ಕಂಡನು ದಿವ್ಯದೃಷ್ಟಿಯಲಿ || 42 ||
(ಅರಣ್ಯಪರ್ವ, ದ್ರೌಪದಿ ಸತ್ಯಭಾಮಾ ಸಂವಾದಪರ್ವ, ಸಂಧಿ 17)

ಕೃಷ್ಣನು ಆ ಅಗುಳನ್ನು ತಿಂದಾಕ್ಷಣ ಅತ್ತ ಸ್ನಾನಕ್ಕೆ ಹೋದ ಋಷಿಗಳಿಗೆ ಕಂಠಪೂರ್ತಿ ಉಂಡಂತೆ ಭಾಸವಾಗಿ, ಉಬ್ಬಸದಂತೆ ಬಂದು, ರೋಮಾಂಚನವಾಯಿತು. ಮೂಗಿನ ಹೊಳ್ಳೆಗಳು ಹಿಗ್ಗಿದುವು. ಕೊರಳಿನ ತನಕ ಹೊಟ್ಟೆ ಉಬ್ಬಿತು. ಇದು ಕೃಷ್ಣನ ಆಗಮನದಿಂದಾಯಿತು ಎಂದು ದೂರ್ವಾಸನು ದಿವ್ಯದೃಷ್ಟಿಯಲ್ಲಿ ಕಂಡುಕೊಂಡನು.

ಬಂದನೀ ಗೋವಿಂದ ಭಕ್ತರ
ಬಂಧುವೇ ಈತನೊಳುಮನಸಿಗೆ
ಬಂದಮನುಜರ ಸೆಣಸ ಮಾಡುವವರಾರುಭುವನದಲಿ |
ಎಂದೆನುತ ದೂರ್ವಾಸಮುನಿಪತಿ
ಬಂದು ಕಂಡನು ಕೃಷ್ಣರಾಯನ
ನಂದು ಕುಂತೀಸುತನ ರಾಯನ ಪರ್ಣಶಾಲೆಯಲಿ || 43 ||
(ಅರಣ್ಯಪರ್ವ, ದ್ರೌಪದಿ ಸತ್ಯಭಾಮಾ ಸಂವಾದಪರ್ವ, ಸಂಧಿ 17)

"ಭಕ್ತವತ್ಸಲ ಗೋವಿಂದನು ಬಂದನು, ಅವನ ಕೃಪಾದೃಷ್ಟಿ ಇದ್ದವರೊಡನೆ ಯಾರು ಸೆಣಸಾಡಬಲ್ಲರು" ಎನ್ನುತ್ತಾ ದೂರ್ವಾಸನು ಯುಧಿಷ್ಠಿರನ ಪರ್ಣಕುಟೀರಕ್ಕೆ ಬಂದು ಕೃಷ್ಣನನ್ನು ಕಂಡನು. ಯುಧಿಷ್ಠಿರನು ದೂರ್ವಾಸನನ್ನು ಊಟಕ್ಕೆ ಕರೆದಾಗ ಅವನಿಗೆಲ್ಲಿದೆ ಹಸಿವು?

ಬೇರು ನೀರುಂಡಾಗ ತಣಿಯದೆ
ಭೂರುಹದ ಶಾಖೋಪಶಾಖೆಗ
ಳೋರಣೆಯ ನಿಜದೇಹವಂಗೋಪಾಂಗವೆಂದೆಂಬ |
ಶ್ರೀರಮಣಸಂತುಷ್ಟನಾದರೆ ಬೇರೆ
ಭೋಜನ ನಮಗೆ ಬೇಹುದೆ
ಭೂರಮಣ ಹೇಳೆಂದುನಗುತಿಂತೆಂದನಾಮುನಿಪ || 50 ||
(ಅರಣ್ಯಪರ್ವ, ದ್ರೌಪದಿ ಸತ್ಯಭಾಮಾ ಸಂವಾದಪರ್ವ, ಸಂಧಿ 17)

ಮೃಷ್ಟ ಭೋಜನದಿಂದ ನಾವ್ ಸಂ
ತುಷ್ಟರಾವೊಲಿದುದನು ಬೇಡ್ಯೆ
ದುಷ್ಟ ಕೌರವ ನಮ್ಮ ಕಳುಹಿದ ಧೂರ್ತ ವಿದ್ಯೆಯಲಿ |
ಕಷ್ಟ ಕೈಗೂಡಿದರೆ ಮಿಗೆ ವ್ರತ
ಗೆಟ್ಟರೇ ಪಾಂಡವರು ಹರಿಪದ
ನಿಷ್ಠರನು ನಿಲುಕುವರೆ ದುರ್ಜನರೆಂದನಾಮುನಿಪ || 51 ||
(ಅರಣ್ಯಪರ್ವ, ದ್ರೌಪದಿ ಸತ್ಯಭಾಮಾ ಸಂವಾದಪರ್ವ, ಸಂಧಿ 17)

"ಮರದ ಬೇರು ನೀರನ್ನು ಹೀರಿದಾಗ, ಅದರ ಎಲ್ಲಾ ಗೆಲ್ಲುಗಳೂ ತೃಪ್ತಿಯಾಗುವಂತೆ ಶ್ರೀ ವಿಷ್ಣುವು ಸಂತೃಪ್ತನಾದರೆ ನಮಗೆ ಭೋಜನ ಬೇಕೆ ಹೇಳು ರಾಜನ್? ಮೃಷ್ಟಾನ್ನ ಭೋಜನದಿಂದ ನಾವು ಸಂತೃಪ್ತರಾದೆವು. ವರವನ್ನು ಕೇಳೆಂದಾಗ ದುಷ್ಟ ದುರ್ಯೋಧನನು ನಮ್ಮನ್ನಿಲ್ಲಿ ಮೋಸದಿಂದ ಕಳುಹಿಸಿದನು. ಕಷ್ಟಬಂದಾಗಲೂ ಪಾಂಡವರು ಶಿಷ್ಟಾಚಾರವನ್ನು ಮರೆತಿಲ್ಲ. ಹರಿಯ ಕರುಣೆ ಪಡೆದವರಿಗೆ ದುರ್ಜನರೇನು ಮಾಡಬಲ್ಲರು?" ಎಂದ ದೂರ್ವಾಸಮುನಿ. ಎಷ್ಟು ಚೆನ್ನಾಗಿ ಈ ಘಟನೆಯನ್ನು ನಿರೂಪಿಸಿದ್ದಾನೆ ಕವಿ!

**ಉತ್ತರನ ಪೌರುಷ5**

ವಿರಾಟನ ಭಾವ ಕೀಚಕನ ವಧೆಯಾಯಿತು ಎಂಬ ಸುದ್ದಿ ತಿಳಿದಾಕ್ಷಣ ದುರ್ಯೋಧನನು ಈ ಕೆಲಸವು ಅಜ್ಞಾತವಾಸದಲ್ಲಿದ್ದ ಭೀಮನಿಂದಲೇ

ಆಗಿರಬೇಕು ಎಂದು ಊಹಿಸಿ, ಪಾಂಡವರ ಅಜ್ಞಾತವಾಸವನ್ನು ಭಂಗಗೊಳಿಸಲು ವಿರಾಟನ ಮೇಲೆ ಯುದ್ಧಕ್ಕೆ ತನ್ನ ಸೇನೆಯನ್ನು ಕಳುಹಿಸಿದನು ಮತ್ತು ಅವರ ಗೋವುಗಳನ್ನು ಅಪಹರಿಸಿದನು. ಆಗ ಪಾಂಡವರು ಖಂಡಿತವಾಗಿಯೂ ವಿರಾಟನ ಸಹಾಯಕ್ಕೆ ಬರುತ್ತಾರೆ, ಅವರ ಗುರುತು ಹಿಡಿದು, ಅವರನ್ನು ಪುನಃ 12 ವರ್ಷ ಅರಣ್ಯವಾಸಕ್ಕೆ ಕಳುಹಿಸಬಹುದು ಎಂದವನಾಸೆ.

ಯುದ್ಧ ಸನ್ನಿಹಿತವಾದಾಗ ವಿರಾಟನ ಮಗ ಹೇಡಿಯಾದ ಉತ್ತರ ಕುಮಾರನು ತನ್ನ ಅಮ್ಮನ ಅಂತಃಪುರದ ಹೆಂಗಳೆಯರ ಮುಂದೆ ಹೇಗೆ ಜಂಭ ಕೊಚ್ಚಿ ಕೊಳ್ಳುತ್ತಾನೆಂದು ಕುಮಾರವ್ಯಾಸನು ವಿರಾಟ ಪರ್ವದಲ್ಲಿ ಹೇಳುವ ರೀತಿ ನೋಡಿ.

ಅಹುದಹುದು ತಪ್ಪೇನು ಜೂಜಿನ
ಕುಹಕದಲಿ ಪಾಂಡವರ ಸೋಲಿಸಿ
ಮಹಿಯನ್ನು ಕೊಂಡಂತೆನ್ನ ಕೆಣಕಿದನೇ ಸುಯೋಧನನು|
ಸಹಸದಿಂದವೆ ತುರುವ ಮರಳಿಸಿ
ತಹೆನು ಬಳಿಕಾಕೌರವನ ನಿ
ರ್ವಹಿಸಲೀವೆನೆ ಸೂರೆಗೊಂಬೆನು ಹಸ್ತಿನಾಪುರವ || 18 ||
(ವಿರಾಟ ಪರ್ವ, ಸಂಧಿ 6)

"ಕಪಟದ್ಯೂತದಲ್ಲಿ ಪಾಂಡವರನ್ನು ಸೋಲಿಸಿ ಭೂಮಿಯನ್ನು ಕಬಳಿಸಿದಂತೆ ನನ್ನನ್ನು ದುರ್ಯೋಧನನು ಕೆಣಕಿದನೋ, ಅದೇನು ತಪ್ಪು? (ಅವನ ಸ್ವಭಾವಕ್ಕೆ ಅನುಗುಣವಾಗಿಯೇ ಮಾಡಿದ್ದಾನೆ). ಸಾಹಸದಿಂದ ಗೋವುಗಳನ್ನು ಬಿಡಿಸಿ ತರುವೆನು, ನಂತರ ಆ ಕೌರವನನ್ನು ಬಿಡುವೆನೆ, ಹಸ್ತಿನಾಪುರವನ್ನು ಕೊಳ್ಳೆಹೊಡೆಯುತ್ತೇನೆ" ಎಂದು ಉತ್ತರನು ಅಂದನು.

ಜವನ ಮೀಸೆಯ ಮುರಿದನೋ ಭೈ
ರವನ ದಾಡೆಯನಲುಗಿದನೋ ಮೃ
ತ್ಯುವಿನ ಮೇಲುದ ಸೆಳೆದನೋ ಕೇಸರಿಯ ಕೆಣಕಿದನೊ|
ಬವರವನು ತೊಡಗಿದನಲಾ ಕೌ
ರವನಕಟ ಮರುಳಾದನೆಂದಾ
ಯುವತಿಯರ ಮೊಗ ನೋಡುತುತ್ತರ ಬಿರುದ ಕೆದರಿದನು || 23 || (ವಿರಾಟ ಪರ್ವ, ಸಂಧಿ 6)

"ಯಮನ ಮೀಸೆಯನ್ನೆಳೆದನೋ, ಈಶ್ವರನ ದಾಡೆಯನ್ನು ಅಲ್ಲಾಡಿಸಿದನೋ, ಯಮನ ಸೆರಗನ್ನೆಳೆದನೋ, ಸಿಂಹವನ್ನು ಕೆಣಕಿದನೋ, ಯುದ್ಧವನ್ನು ಸಾರಿ ಅಯ್ಯೋ, ಈ ಕೌರವನು ಹುಚ್ಚಾಟಿಕೆ ಮಾಡಿದನಲ್ಲ" ಎಂದು ಯುವತಿಯರ ಮುಂದೆ ಉತ್ತರನು ಬಡಾಯಿ ಕೊಚ್ಚಿಕೊಂಡನು.

ಆರೊಡನೆ ಕಾದುವೆನು ಕೆಲವರು
ಹಾರವರು ಕೆಲರಂತಕನ ನೆರೆ
ಯೂರವರು ಕೆಲರಧಮಕುಲದಲಿ ಜನಿಸಿ ಬಂದವರು |
ವೀರರೆಂಬವರಿವರು ಮೇಲಿ
ನ್ನಾರ ಹೆಸರುಂಟವರೊಳೆಂದು ಕು
ಮಾರ ನೆಣಗೊಬ್ಬಿನಲಿ ನುಡಿದನು ಹೆಂಗಳಿದಿರಿನಲಿ || 24 ||
(ವಿರಾಟ ಪರ್ವ, ಸಂಧಿ 6)

"ಯಾರೊಡನೆ ಯುದ್ಧ ಮಾಡಲಿ, ಕೆಲವರು ಬ್ರಾಹ್ಮಣರು (ಕೃಪಾಚಾರ್ಯ, ದ್ರೋಣ), ಕೆಲವರು ಯಮನ ಪಟ್ಟಣಕ್ಕೆ ಹತ್ತಿರವಾದವರು (ಮುದುಕರು, ಭೀಷ್ಮ), ಕೆಲವರು ನೀಚಕುಲದಲ್ಲಿ ಹುಟ್ಟಿದವರು (ಕರ್ಣ). ವೀರರೆಂದರೆ ಇವರು, ಇನ್ನು ಅವರಲ್ಲಿ ಯಾರು ವೀರರಿದ್ದಾರೆ, ಹೇಳಿ" ಎಂದು ಕೊಬ್ಬಿನಿಂದ ಹೆಂಗಸರ ಮುಂದೆ ಅಂದನು.

ಆನಂತರ, ಯುದ್ಧಭೂಮಿಯಲ್ಲಿ ಪಾಂಡವರ ಸೈನ್ಯವನ್ನು ಕಂಡು, ಹೆದರಿ ರಥವನ್ನು ಬಿಟ್ಟು ಓಡಿಹೋದ ಉತ್ತರನನ್ನು ಅರ್ಜುನನು (ಬೃಹನ್ನಳೆ) ಹಿಡಿದು, ನೀನು ಸಾರಥಿಯಾಗು, ನಾನು ಯುದ್ಧವನ್ನು ಮಾಡುತ್ತೇನೆ ಎಂದು ವಿಶ್ವಾಸ ಕೊಟ್ಟು, ತಾವು ಅಜ್ಞಾತವಾಸಕ್ಕೆ ಮೊದಲು ಶಸ್ತ್ರಗಳನ್ನು ಅಡಗಿಸಿಟ್ಟ ಸ್ಮಶಾನದ ಬನ್ನಿಮರದಿಂದ ಅವುಗಳನ್ನಿಳಿಸಿ, ಯಾವ ಶಸ್ತ್ರ ಯಾವ ಪಾಂಡವನದು ಎಂದು ವಿವರಿಸಿದನು. ಇದನ್ನು ನೋಡಿ, ಕೇಳಿ ಬೆರಗಾದ ಉತ್ತರನು, "ಬೃಹನ್ನಳೆ, ನೀನು ಯಾರು?" ಎಂದು ಪ್ರಶ್ನಿಸಿದನು.

ಆರು ನೀನರ್ಜುನನೊ ನಕುಲನೊ
ಮಾರುತನ ಮಗನೋ ಯುಧಿಷ್ಠಿರ
ವೀರನೋ ಸಹದೇವನೋ ಮೇಣವರ ಬಾಂಧವನೋ |
ಧೀರ ಹೇಳ್ಳೆ ಬೇಡಿಕೊಂಬೆನು
ಕಾರುಣಿಕ ವಿಸ್ತರಿಸು ಪಾಂಡುಕು
ಮರರಾಯುಧತತಿಯ ನೀನೆಂತರಿಯಬಹುದೆಂದ || 47 ||
(ವಿರಾಟ ಪರ್ವ, ಸಂಧಿ 7)

"ಯಾರು ನೀನು ಅರ್ಜುನನೋ, ನಕುಲನೋ, ಭೀಮನೋ, ಯುಧಿಷ್ಠಿರನೋ, ಸಹದೇವನೋ ಅಥವಾ ಅವರ ಬಂಧುವೋ? ವೀರನೇ, ವಿಸ್ತಾರವಾಗಿ ಹೇಳಬೇಕೆಂದು ಬೇಡಿಕೊಳ್ಳುತ್ತೇನೆ, ಪಾಂಡವರ ಶಸ್ತ್ರಗಳ ಬಗ್ಗೆ ನಿನಗೆ ಹೇಗೆ ಅರಿವಿದೆ?"

ಆದೊಡಾನರ್ಜುನನು ಬಾಣಸಿ
ಯಾದ ವಲಲನು ಭೀಮ ವರಯತಿ
ಯಾದ ಕಂಕನು ಧರ್ಮಪುತ್ರನು ನಿಮ್ಮ ಗೋಕುಲವ |

ಕಾದವನು ಸಹದೇವ ರಾವುತ
ನಾದವನು ನಕುಲನು ವಿಲಾಸಿನಿ
ಯಾದವಳು ಸೈರಂಧ್ರಿ ಐವರ ರಾಣಿ ಕೇಳೆಂದ || 48 ||
(ವಿರಾಟ ಪರ್ವ, ಸಂಧಿ 7)

ಆಗ ಅರ್ಜುನನು, "ನಾನು ಅರ್ಜುನ, ಅಡುಗೆಯ ವಲಲನು ಭೀಮ, ಕಂಕಭಟ್ಟನು ಧರ್ಮರಾಯ, ನಿಮ್ಮ ಗೋವಳನು ಸಹದೇವ, ಲಾಯವನ್ನು ನೋಡಿಕೊಳ್ಳುವವನು ನಕುಲ ಮತ್ತು ಸೈರಂಧ್ರಿಯು ನಾವೈವರ ರಾಣಿ (ದ್ರೌಪದಿ)" ಎಂದ. ಉತ್ತರನು ತಲೆಬಾಗಿ ಅರ್ಜುನನನ್ನು ವಂದಿಸಿ, ಅವನ ಹತ್ತು ಹೆಸರುಗಳನ್ನು ಹೇಳಬೇಕೆಂದು ಬೇಡಿಕೊಂಡಾಗ ಅರ್ಜುನನು ಹೇಗೆ ಹೇಳುತ್ತಾನೆ, ನೋಡಿ.

ಎನಲು ನಸುನಗುತರ್ಜುನನು ಫಲು
ಗುಣ ಧನಂಜಯ ಜಿಷ್ಣು ಸಿತವಾ
ಹನ ವಿಜಯ ಭೀಭತ್ಸು ಪಾರ್ಥ ಕಿರೀಟಿ ಮೊದಲಾದ |
ವಿನುತಕೃಷ್ಣನು ಸವ್ಯಸಾಚಿಗ
ಲೆನಿಪಪೆಸರುಂಟೆನುತ ಪುನರಪಿ
ತನಗೆ ಬಂದಂದವನು ವಿಸ್ತರವಾಗಿ ವಿವರಿಸಿದ || 51 ||
(ವಿರಾಟ ಪರ್ವ, ಸಂಧಿ 7)

ನಸುನಗುತ್ತಾ ಅರ್ಜುನನು "ನನಗೆ ಫಲ್ಗುಣ, ಧನಂಜಯ, ಜಿಷ್ಣು, ಶ್ವೇತವಾಹನ, ವಿಜಯ, ಭೀಭತ್ಸು, ಪಾರ್ಥ, ಕಿರೀಟಿ, ಕೃಷ್ಣ, ಸವ್ಯಸಾಚಿಗಳೆಂಬ ಹೆಸರುಗಳಿವೆ" ಎಂದು ಹೇಳಿ, ಅವುಗಳು ಬಂದ ಕಾರಣವನ್ನೂ ವಿವರಿಸಿದ. ಅರ್ಜುನನ ಹೆಸರುಗಳ ಬಗ್ಗೆ ಗೊಂದಲಗಳಿವೆ, ಅವು ಇಲ್ಲಿ ಅಪ್ರಸ್ತುತ, ನಾನು ಹೇಳುವುದಿಲ್ಲ. ಇಲ್ಲಿ ನೋಡಿ, ಅರ್ಜುನ ಕೂಡಿಸಿ ಹನ್ನೊಂದು ಹೆಸರುಗಳಾದುವು. ವ್ಯಾಸರು ಅರ್ಜುನ ಎಂಬ ಹೆಸರನ್ನು ಸೇರಿಸಿದ್ದಾರೆ, ಆದರೆ ಪಾರ್ಥ ಎಂಬುದನ್ನು ಬಿಟ್ಟು ಹತ್ತು ಹೆಸರುಗಳನ್ನು ಹೇಳಿದ್ದಾರೆ (ವ್ಯಾಸರ ಸಂಸ್ಕೃತ ಭಾರತ, ವಿರಾಟ ಪರ್ವ, ಅಧ್ಯಾಯ 39, ಶ್ಲೋ. 8).

**ಪಾರ್ಥಸಾರಥಿ6**

ಯುದ್ಧವು ಅನಿವಾರ್ಯವೆಂದು ಅರಿವಾದಾಗ ಕೃಷ್ಣನ ಸಹಾಯ ಬೇಡಲು ಅರ್ಜುನ ಮತ್ತು ದುರ್ಯೋಧನರಿಬ್ಬರೂ ಹೋದರು. ಆಗ ಕೃಷ್ಣನು ಯುದ್ಧ ಬೇಡವೆಂದು ದುರ್ಯೋಧನನಿಗೆ ಬುದ್ಧಿಹೇಳಿದನು.

ಅವಧರಿಸು ಮುರವೈರಿ ಧರ್ಮ
ಶ್ರವಣಕೋಸುಗ ಬಾರೆವಾಂ ವೀ
ರವರ ಪಂಥದ ಕದನವಿದ್ಯಾಕಾಮವೆಮಗಾಯ್ತು |
ನಿವಗೆ ನಾವಿತ್ತಂಡ ಸರಿ ಪಾಂ
ಡವರಿಗೆಯು ಮನದೊಲುವಿನೊಳು ಕೌ
ರವರಿಗೆಯು ಬಲಕೊಡಬೇಕೆಂದನು ಸುಯೋಧನನು || 31 ||
(ಉದ್ಯೋಗ ಪರ್ವ, ಸಂಧಿ 1)

"ಕೃಪೆಯಿಡು ಕೃಷ್ಣ, ಧರ್ಮಪ್ರವಚನ ಕೇಳಲು ನಾವಿಲ್ಲಿ ಬಂದಿಲ್ಲ. ವೀರರಿಗೆ ಉಚಿತವಾದ ಯುದ್ಧವು ನಮಗೆ ಪ್ರಾಪ್ತವಾಗಿದೆ. ನಿಮಗೆ ಎರಡು ತಂಡಗಳೂ ಸರಿಸಮಾನ, ಪಾಂಡವರಿಗೆ ನಿಮ್ಮ ಮನವನ್ನು, ಕೌರವರಿಗೆ ನಿಮ್ಮ ಸೈನ್ಯವನ್ನು ಕೊಡಬೇಕು" ಎಂದು ದುರ್ಯೋಧನನು ಅಂದನು.

ಎನ್ನಲು ತಂಬುಲಸೂಸೆ ನಗುತ
ರ್ಜುನನ ನೋಡಿದನನಸುರರಿಪು ನಿ
ನ್ನನುವ ಪೇಳ್ಳೆ ಪಾರ್ಥನೆನೆ ತಲೆವಾಗಿ ಕೈಮುಗಿದು | ಎನಗೆ
ಮತ ಬೇರೇನು ದುರ್ಯೋ
ಧನನ ಮತವೇ ತನ್ನ ಮತ ನಿ
ಮ್ಮನುನಯವೆ ನಯವೆಮ್ಮೊಳೀಸ್ವಾತಂತ್ರ್ಯವಿಲ್ಲೆಂದ || 32 ||
(ಉದ್ಯೋಗ ಪರ್ವ, ಸಂಧಿ 1)

ಇದನ್ನು ಕೇಳಿ ತಾಂಬೂಲ ತುಂಬಿದ ಬಾಯಲ್ಲಿ ನಗೆಸೂಸಿ ಕೃಷ್ಣನು ಅರ್ಜುನನ್ನು ನೋಡಿ "ನೀನೆನ್ನುತ್ತೀ" ಅಂದಾಗ ಅರ್ಜುನನು ಕೈಮುಗಿದು ತಲೆಬಗ್ಗಿಸಿ "ದುರ್ಯೋಧನನ ಅಭಿಪ್ರಾಯವೇ ನನ್ನದು, ನಿಮ್ಮ ಸಹಾಯ ಬೇಡುವುದೇ ನಮ್ಮ ಉತ್ತಮ ನಿರ್ಧಾರ. ಬೇರೇನೂ ಬೇಡುವ ಸ್ವಾತಂತ್ರ್ಯ ನನಗಿಲ್ಲ" ಅಂದ. (ನಯ = political wisdom11, ನೀತಿಶಾಸ್ತ್ರ, ಉಪಾಯ12).

ಆದೊಡಾವಿಹೆ ವೊಂದುಕಡೆಯೊಳು
ಕಾದುವವರಾವಲ್ಲ ಇತರೇ
ಯಾದವರು ಕೃತವರ್ಮ ನಾರಾಯಣ ಮಹಾಸೇನೆ |
ಕಾದುವವರಿವರೊಂದುದೆಸೆ ಯೆರ
ಡಾದುದಿವರೊಳು ಮೆಚ್ಚಿದುದ ನೀ
ನಾದರಿಸಿ ವರಿಸೆಂದು ಪಾರ್ಥಂಗಸುರರಿಪು ನುಡಿದ || 33 ||
(ಉದ್ಯೋಗ ಪರ್ವ, ಸಂಧಿ 1)

"ಹಾಗಾದರೆ ನಾನೊಂದು ಪಕ್ಷದಲ್ಲಿ ಇರುತ್ತೇನೆ, ಆದರೆ ಯುದ್ಧ ಮಾಡಲಾರೆ, ಮತ್ತೊಂದು ಪಕ್ಷದಿಂದ ಯಾದವರು, ಕೃತವರ್ಮ, ನಾರಾಯಣ ಮಹಾಸೇನೆ ಕಾದುವರು. ಇವೆರಡರಲ್ಲಿ ನಿನಗೇನು ಬೇಕು, ಅದನ್ನು ಕೇಳಿಕೊ" ಎಂದು ಅರ್ಜುನನನ್ನು ಕೃಷ್ಣನು ಕೇಳಿದ.

ನಾವು ಬಡವರು ಬಡವರಿಗೆ ದಿಟ
ನೀವು ಬೆಂಬಲವೆಂಬ ಬಿರುದನು
ದೇವ ಕೇಳಿದು ಬಲ್ಲೆನೆಂದನು ಪಾರ್ಥ ಕೈಮುಗಿದು |

ನೀವು ಸುಖದೊಳು ಪಾಂಡವರನು
ಜ್ಜೀವಿಸುವುದೆಮಗುಳಿದ ಯದುಭೂ
ಪಾವಳಿಯ ಕೃಪೆಮಾಡಿಯೆಂದನು ಕೌರವರ ರಾಯ || 35 ||
(ಉದ್ಯೋಗ ಪರ್ವ, ಸಂಧಿ 1)

"ನಾವು ಬಡವರು, ನೀವು ಬಡವರ ಬಂಧು ಎಂದು ಕೇಳಿದ್ದೇನೆ. ನಮಗೆ ನೀವೇ ಸಾಕು" ಎಂದು ಅರ್ಜುನನು ಅಂದಾಗ, "ನೀವು ಪಾಂಡವರ ಪಕ್ಷದಲ್ಲಿದ್ದು, ಅವರನ್ನು ಅನುಗ್ರಹಿಸಿ, ಉಳಿದ ನಿಮ್ಮ ಸೇನೆಯನ್ನು ನಮಗೆ ಕೊಡಿ" ಎಂದು ದುರ್ಯೋಧನನು ಹೇಳಿದನು.

ನಾವು ಭಕ್ತರು ಭಕ್ತಭೃತ್ಯರು
ನೀವು ಸಾರಥಿಯಾಗಿ ನಮ್ಮನು
ಕಾವುದೆಂದರ್ಜುನನು ಹಣೆಚಾಚಿದನು ಹರಿಪದಕೆ || 44 ನೇ ನುಡಿಯ ಎರಡನೆ ಭಾಗ || (ಉದ್ಯೋಗ ಪರ್ವ, ಸಂಧಿ 1)
ಎನ್ನಲು ನಗುತೆತ್ತಿದನು ಸಾರಥಿ
ತನವ ಕೈಕೊಂಡನು ಕೃಪಾಳುವಿ
ನನುನಯವ ನಾವೆತ್ತ ಬಲ್ಲೆವು ಭೃತ್ಯವರ್ಗದೊಳು |
ತನಗಹಂಕೃತಿ ಯಿಲ್ಲ ವೈರೋ
ಚನಿಯ ಪಡಿಹಾರಿಕೆ ಕಿರೀಟಿಯ
ಮನೆಯ ಬಂಡಿಯ ಬೋವನಾದನು ವೀರನಾರಯಣನು || 44 || (ಉದ್ಯೋಗ ಪರ್ವ, ಸಂಧಿ 1)

"ನಾವು ಭಕ್ತರು, ನೀವು ಭಕ್ತರ ಸೇವಕರು, ಸಾರಥಿಯಾಗಿ ನಮ್ಮನ್ನು ರಕ್ಷಿಸುವುದು" ಎಂದು ಅರ್ಜುನನು ಕೃಷ್ಣನ ಕಾಲಿಗೆ ಬಿದ್ದನು.
ಇದನ್ನು ಕೇಳಿ ಕೃಷ್ಣನು ನಗುತ್ತ ಸಾರಥಿಯಾಗಲು ಒಪ್ಪಿದನು. ಕರುಣಾಸಾಗರನ ಪ್ರೀತಿಯನ್ನು ನಾವು ಸೇವಕರೇನು ಬಲ್ಲೆವು? ತನಗೆ ದುರಭಿಮಾನವಿಲ್ಲ ಎಂದು ಅರ್ಜುನನ ರಥಕ್ಕೆ ಸಾರಥಿಯಾದನು ವೀರನಾರಾಯಣನು. (ವೈರೋಚನಿ = ವಿರೋಚನನ ಮಗ ಬಲಿ, ಪಡಿಹಾರಿಕೆ = ದ್ವಾರಪಾಲಕತನ, ಒಟ್ಟಾರ್ಥ?)

**ಅರ್ಜುನ ವಿಷಾದಯೋಗ**[7]

ಕೌರವರ ಸೈನ್ಯದಲ್ಲಿ ತನ್ನ ಬಂಧುಬಾಂಧವರನ್ನು ಕಂಡು ಅವರೊಡನೆ ಕಾದಬೇಕು, ನಂತರ ಅವರ ಹತ್ಯೆಮಾಡುವ ಪ್ರಮೇಯವೂ ಬರಬಹುದೆಂದು ಖಿನ್ನನಾಗಿ ಶಸ್ತ್ರತ್ಯಾಗವನ್ನು ಮಾಡಿದುದು ಮತ್ತು ಈ ಪ್ರಕರಣವೇ ಶ್ರೀಮದ್ಭಗವದ್ಗೀತೆಗೆ ನಾಂದಿಯಾಯಿತು ಎಂಬುದು ಎಲ್ಲರಿಗೂ ಅರಿವಿದೆ. ಕುಮಾರವ್ಯಾಸನು ಈ ಪ್ರಸಂಗವನ್ನು ಚೆನ್ನಾಗಿ ವಿವರಿಸಿದ್ದಾನೆ. ಗೀತೆಯನ್ನೂ ಸುಂದರವಾಗಿಯೇ ಹೆಣೆದಿದ್ದಾನೆ, ಅದನ್ನು ಇಲ್ಲಿ ನಿರೂಪಣೆ ಮಾಡಲು ಸಾಧ್ಯವಿಲ್ಲವಲ್ಲ! ಆದರೆ ಗೀತೆಗೆ ಮೂಲವಾದ ಘಟನೆಯನ್ನು ವಿವರಿಸಿದ ಪರಿ ಓದಿ.

ಯುದ್ಧದ ಮೊದಲನೇ ದಿನ ಎರಡೂ ಸೇನೆಗಳು ಎದುರುಬದಿರಾಗಿ ನಿಂತಾಗ ಅರ್ಜುನನಿಗೆ ಕೌರವರ ಪರವಾಗಿ ಹೋರಾಡಲು ಬಂದ ವೀರರು ಯಾರು, ತಾನು ಯಾರೊಡನೆ ಕಾದಬೇಕು ಎಂದು ಅರಿಯುವ ಇಚ್ಛೆಯಾಗಿ, ತನ್ನ ರಥವನ್ನು ಕೌರವರ ಸೇನೆಯ ಮುಂದೆ ನಿಲ್ಲಿಸಬೇಕೆಂದು ಸಾರಥಿ ಕೃಷ್ಣನನ್ನು ಕೇಳಿಕೊಂಡನು. ಕೃಷ್ಣನು ಅಂತೆಯೇ ಮಾಡಿದಾಗ

ಮೆಟ್ಟಿ ನೋಡಿದನಹಿತ ರಾಯರ
ಥಟ್ಟುಗಳ ತೆರಳಿಕೆಯನುತ್ಸಹ
ಗೆಟ್ಟು ಫಲುಗುಣ ಸೆಡೆದು ಮನದಲಿ ನೊಂದು ತಲೆವಾಗಿ|
ಕೆಟ್ಟ ಕಾಯದ ಸುಖಕಳುಪಿ ಒಡ
ಹುಟ್ಟಿದರ ಕೈಯಾರ ಕೊಂದರೆ
ಮುಟ್ಟದೇ ಕಡುಪಾಪ ಘನಪರಿತಾಪ ತನಗೆಂದ || 26 ||
(ಭೀಷ್ಮಪರ್ವ, ಸಂಧಿ 3)

ವೈರಿರಾಜರ ಸೇನೆಯ ಗುಂಪುಗಳನ್ನು ನೋಡಿ ಉತ್ಸಾಹಕುಂದಿ, ಮನದಲ್ಲೇ ನೊಂದು ಅರ್ಜುನನು ತಲೆಬಾಗಿದನು. “ಪಾಪಿ ದೇಹದ ಸುಖಕ್ಕೆ ಆಸೆಪಟ್ಟು ಬಂಧುಗಳನ್ನು ತಾನು ಕೈಯಾರೆ ಕೊಂದರೆ ತನಗೆ ಘೋರಪಾಪ, ಅತೀವ ದುಃಖವಾಗದೇ?” ಎಂದು ಅರ್ಜುನನಂದ.

ಕೆಳಬರೊಡಹುಟ್ಟಿದರು ಗುರುಗಳು
ಕೆಲರು ಕೆಲಬರು ಮಾವ ಮೈದುನ
ನಳಿಯ ಮಗ ಹಿರಿಯಯ್ಯ ಮುತ್ತಯ ಮೊಮ್ಮನೆನಿಸುವರು |
ಕಳದೊಳಿನಿಬರಕೊಂದು ಶಿವಶಿವ
ಕೆಲವು ದಿವಸದ ಸಿರಿಗೆ ಸೋಲಿದು
ಮುಳುಗುವೆನೆ ಭವಸಿಂಧುವಿನೊಳಾನೆನುತ ಮನಮುರಿದ || 27 || (ಭೀಷ್ಮಪರ್ವ, ಸಂಧಿ 3)

“ಕೆಲವರು ಒಡಹುಟ್ಟಿದವರು, ಕೆಲವರು ಗುರುಗಳು, ಕೆಲವರು ಮಾವ, ಮೈದುನ, ಅಳಿಯ, ಪುತ್ರ, ದೊಡ್ಡಪ್ಪ, ಮುತ್ತಜ್ಜ, ಮೊಮ್ಮಗನೆನಿಸುವವರು. ಕ್ಷಣಿಕ ಸುಖಕ್ಕಾಗಿ ಯುದ್ಧದಲ್ಲಿ ಇವರನ್ನು ಕೊಂದರೆ ಶಿವಾ, ಭವಸಾಗರದಲ್ಲಿ ಮುಳುಗಿಹೋಗುತ್ತೇನೆ” ಎಂದು ದುಃಖಿಸಿದ.

ಇದಿರುಗಾಣದೆ ಕೊಲೆಗೆ ನಿರ್ಬಂ
ಧದಲಿ ಬೆಸಸುವ ಕೃಷ್ಣನಕಟಾ ಮದಮುಖನೊ
ದುರ್ಬೋಧಕನೋ ವಂಚಕನೊ ಘಾತಕನೊ |
ಯದುಗಳನ್ವಯದೊಳಗೆ ಕರುಣಾ
ಸ್ಪದರು ಜನಿಸಿರಲಾ ಮುರಾರಿಯ
ಹೃದಯ ಬೆಟ್ಟಿತೆನುತ್ತ ಫಲುಗುಣ ಬಾಗಿದನು ಶಿರವ || 28 ||
(ಭೀಷ್ಮಪರ್ವ, ಸಂಧಿ 3)

“ಹಿಂದೆಮುಂದೆ ನೋಡದೆ ಹತ್ಯೆಗೆ ಪ್ರೇರೇಪಿಸುವ ಕೃಷ್ಣನು ದುಷ್ಟನೋ, ದುರ್ಬೋಧಕನೋ, ಮೋಸಗಾರನೋ, ಕೊಲೆಗಾರನೋ? ಯದುವಂಶದಲ್ಲಿ ಕರುಣಾಳುಗಳು ಹುಟ್ಟಿರಲು ಈ ಕೃಷ್ಣನು (ಮಾತ್ರ) ನಿಷ್ಠುರನಾದನಲ್ಲ!” ಎಂದು ಅರ್ಜುನನು ತಲೆ ತಗ್ಗಿಸಿದನು. (ಮದಮುಖ = ದುಷ್ಟ[12], ಬೆಟ್ಟಿತು = that which is hard[11], ನಿಷ್ಠುರವಾಯಿತು[12]).

ನರಕಕರ್ಮವ ಮಾಡಿ ಇಹದೊಳು
ದುರಿತಭಾಜನನಾಗಿ ಕಡೆಯಲಿ
ಪರಕೆ ಬಾಹಿರವಾಗಿ ನಾನಾಯೋನಿಯೊಳು ಸುಳಿದು |
ಹೊರಳುವನುವನು ಕೃಷ್ಣದೇವನು
ಕರುಣಿಸಿದನೇ ಹಿತವನೇ ಹರ ಹರ
ಮಹಾದೇವೊಂದು ಬೋಳಕೆ ಬದುಕಿದೆನೆ ಯೆಂದ || 29 ||
(ಭೀಷ್ಮಪರ್ವ, ಸಂಧಿ 3)

“ಭೂಮಿಯಲ್ಲಿ ಘೋರ ಪಾಪವನ್ನು ಮಾಡಿದವನು, ನರಕಕ್ಕೆ ಸಲ್ಲುವವನಾಗಿ, ಕೊನೆಯಲ್ಲಿ ಮೋಕ್ಷ ಸಿಗದೆ, ನಾನಾ ಪ್ರಾಣಿಗಳಾಗಿ ಹುಟ್ಟಿ ನರಳುತ್ತಾನೆ. ಕೃಷ್ಣನು (ನನಗೆ) ಹಿತವನ್ನು ಬೋಧಿಸಿದನೇ, ಮಹಾದೇವ, ಈ ಕ್ಷಣ (ನೋಡಲು) ನಾನು (ಇನ್ನೂ) ಬದುಕಿದ್ದೇನೆಯೇ?” ಎಂದನು.

ಮುಳಿಯಲಾಗದು ಕೃಷ್ಣ ನಿಮ್ಮನು
ಉುಹಲಾನು ಸಮರ್ಥನೇ ಕುಲ
ಕೊಲೆಗೆ ಕೊಕ್ಕರಿಸಿದೆನು ನನೆದನು ಕರುಣ ವಾರಿಯಲಿ |
ಬಲುಹನೀ ಮುಖದಲ್ಲಿ ತೋಱುವ
ಡಳುಕಿದೆನು ಸಾಮ್ರಾಜ್ಯಸಂಪ
ತ್ತಿಳೆಯ ಸಕಲಭ್ರಾಂತಿ ಬೀತುದು ದೇವಾ ಕೇಳೆಂದ || 30 ||
(ಭೀಷ್ಮಪರ್ವ, ಸಂಧಿ 3)

“ಕೃಷ್ಣ, ಸಿಟ್ಟುಮಾಡಬೇಡ. ನಿನ್ನನ್ನು ತಿಳಿದುಕೊಳ್ಳಲು ನಾನು ಸಮರ್ಥನಲ್ಲ. ಕುಲದವರನ್ನು ನಾನು ಕೊಲ್ಲಲು ಹವಣಿಸಿದೆ” ಎಂದು ಕರುಣಾಭಾಷ್ಪದಲ್ಲಿ ನನೆದು, “ಪರಾಕ್ರಮವನ್ನು ಸೈನ್ಯದ ಮುಂದೆ ತೋರಲು ಹೋಗಿ ತಪ್ಪುಮಾಡಿದೆ. ಈಗ ರಾಜ್ಯ, ಸಂಪತ್ತು, ಭೂಮಿಯ ಮೇಲಿನ ಮೋಹ ಕಳೆಯಿತು, ದೇವಾ, ಕೇಳು” ಎಂದ.

ಕೆಡುವ ಕಾಯವ ನೆಚ್ಚಿ ಬಂಧುಗ
ಳೊಡನೆ ವೈರವ ಮಸೆದು ನರಕಕೆ
ಕೆಡೆವೆನೇ ತಾನೆನುತ ರಥದೊಳು ಬಿಲ್ಲನಿಳುಹಿದನು || 31 ರ
ಎರಡನೆ ಅರ್ಧ || (ಭೀಷ್ಮಪರ್ವ, ಸಂಧಿ 3)

“ಎಂದಾದರೊಮ್ಮೆ ಹಾಳಾಗಿ ಹೋಗುವ ಈ ದೇಹಸುಖಕ್ಕಾಗಿ ಬಂಧುಗಳೊಡನೆ ವೈರವನ್ನು ಕಟ್ಟಿಕೊಂಡು ನರಕಕ್ಕೆ ನಾನು ಹೋಗಲೇ” ಎಂದು ರಥದಲ್ಲಿ ಬಿಲ್ಲನ್ನು ಕೆಳಗಿಟ್ಟುಬಿಟ್ಟನು. ಎಷ್ಟು ಸುಂದರವಾಗಿದೆ ಈ ನಿರೂಪಣೆ!

**ಅಶ್ವತ್ಥಾಮನ ನಾರಾಯಣಾಸ್ತ್ರ[8]**

ಮೋಸದಿಂದ ಪಾಂಡವರು ದ್ರೋಣಾಚಾರ್ಯನಿಂದ ಶಸ್ತ್ರತ್ಯಾಗಮಾಡಿಸಿ ಆ ನಂತರ ಅವನನ್ನು ವಧಿಸಿದಾಗ, ಮಗ ಅಶ್ವತ್ಥಾಮನ ಸಿಟ್ಟು ನೆತ್ತಿಗೇರಿ ಅತ್ಯಂತ ಪ್ರಬಲಾಸ್ತ್ರ ನಾರಾಯಣಾಸ್ತ್ರವನ್ನು ಪಾಂಡುಸೇನೆಯ ಮೇಲೆ ಪ್ರಯೋಗಿಸಿದನು. ನಾರಾಯಣಾಸ್ತ್ರವು ಬೆಂಕಿಯನ್ನುಗುಳುವ ಪರಮಾಸ್ತ್ರ. ಅಗ್ನಿ ಅಸ್ತ್ರವೂ ಬೆಂಕಿಯನ್ನುಗುಳುತ್ತದೆ. ಆದರೆ ನಾರಾಯಣಾಸ್ತ್ರವು ಬೆಂಕಿಯನ್ನುಗುಳಿ ಶಸ್ತ್ರ ಹಿಡಿದ ಶತ್ರುಗಳನ್ನು ನಾಶಪಡಿಸದೆ ಹಿಂದೆ ಹೋಗದು. ಅಗ್ನಿ ಅಸ್ತ್ರಕ್ಕೆ ಪರ್ಜನ್ಯಾಸ್ತ್ರದಿಂದ (ಮಳೆಯ ಅಸ್ತ್ರ) ಶಮನ ಮಾಡಬಹುದು. ನಾರಾಯಣಾಸ್ತ್ರಕ್ಕೆ ಶಸ್ತ್ರ ತ್ಯಾಗ ಮಾತ್ರ ಶಮನ. ಅದು ಪಾಂಡುಸೇನೆಯನ್ನು ಸುಡಲಾರಂಭಿಸಿದಾಗ, ಪಾಂಡವರು ಕಂಗಾಲಾದರು.

ವಾಯಕಂಜದಿರಂಜದಿರಿ ಫಡ
ಬಾಯ ಬಿಟ್ಟರೆ ಹೋಹುದೇ ನಿ
ಮ್ಮಾಯುಷಕೆ ಹೊಣೆ ತಾನು ಹೇಳಿತ ಮಾಡಿ ಬೇಗದಲಿ |
ಆಯುಧಂಗಳ ಬಿಸುಟು ಕರಿ ರಥ
ಜಾಯಿಲಂಗಳನಿಳಿದು ಬದುಕುದು
ಪಾಯವೆಂದಸುರಾರಿ ಸಾರಿದನಂದು ನಿಜಬಲಕೆ || 37 ||
(ದ್ರೋಣ ಪರ್ವ, ಸಂಧಿ 19)
ಹರಿಯ ಬೈಗಳು ಬೆದರಿಸಲು ನೃಪ
ರಿರೆ ನಿರಾಯುಧರಾಗಿ ಮಾದ್ರೇ
ಯರು ಶಿಖಂಡಿ ಕುಮಾರಕರು ಪಾಂಚಾಲನಂದನರು
ಕರದ ಕದಪಿನ ತಳಿತ ಮುಸುಕಿನ
ಮುರಿದ ಮೋರೆಯ ಮುಂದೆ ಹರಹಿದ
ತರತರದ ಕೈದುಗಳ ಸುಭಟರ ಕಂಡುದಮಳಾಸ್ತ್ರ || 41 ||
(ದ್ರೋಣ ಪರ್ವ, ಸಂಧಿ 19)

"ಕಪಟಕ್ಕೆ (ಶತ್ರುದಾಳಿಗೆ) ಹೆದರಬೇಡಿ, ಬಾಯ್ಬಿಟ್ಟು ನಿಂತರೆ ಅದು ಹೋಗುವುದೇ? ನಿಮ್ಮ ಜೀವನಕ್ಕೆ ನಾನು ಹೊಣೆ, ಆಯುಧಗಳನ್ನು ಬಿಸಾಡಿ, ಆನೆ, ರಥ, ಕುದುರೆಗಳಿಂದಿಳಿಯುವುದೇ ಬದುಕುವ ದಾರಿ" ಎಂದು ಕೃಷ್ಣನು ತನ್ನ ಸೈನ್ಯಕ್ಕೆ ಹೇಳಿದನು. (ವಾಯ = ಕಪಟ, ಮೋಸ11, ಜಾಯಿಲ = ನಿಜವಾದ ಅರ್ಥ ನಾಯಿ11, 12, ಇಲ್ಲಿ ಕುದುರೆ ಎಂದು ಅರ್ಥಮಾಡಿಕೊಳ್ಳಬೇಕು). ಕೃಷ್ಣನ ಮಾತುಗಳಿಂದ

ಹೆದರಿದ ನಕುಲಸಹದೇವರು, ಕುಂತಿಕುಮಾರರು, ಶಿಖಂಡಿ, ದ್ರೌಪದೇಯರು, ದೃಷ್ಟದ್ಯುಮ್ನರು ನಿರಾಯುಧರಾದರು. ಕಪ್ಪಾದ ಗಲ್ಲಗಳ, ಕಾಂತಿಹೀನವಾದ ಜೋಲು ಮುಖದ ವೀರರ ಮುಂದೆ ಬಿದ್ದ ಶಸ್ತ್ರಗಳನ್ನು ಆ ಅಸ್ತ್ರ ನೋಡಿತು. ಭೀಮನು ಮಾತ್ರ ಗರ್ವದಿಂದ, "ನಾನು ಹೇಡಿಯಲ್ಲ, ರಣರಂಗದಲ್ಲಿ ಶಸ್ತ್ರತ್ಯಾಗ ಮಾಡಲಾರೆ" ಎಂಬ ಮೊಂಡುತನದಿಂದ ಮುನ್ನುಗ್ಗಿದಾಗ ನಾರಾಯಣಾಸ್ತ್ರವು ಅವನನ್ನು ಸುಡಲನುವಾಯಿತು. ಕೃಷ್ಣನು ಕೂಡಲೇ ಅದರ ತೀಕ್ಷ್ಣತೆಯನ್ನು ಕಡಿಮೆಮಾಡಲು ಅರ್ಜುನನಿಗೆ ವರುಣಾಸ್ತ್ರವನ್ನು (ಮಳೆ ತರುವ ಅಸ್ತ್ರ) ಪ್ರಯೋಗಿಸಲು ಹೇಳಿದ. ಅದರ ಪ್ರಭಾವ ನಾರಾಯಣಾಸ್ತ್ರದ ಮುಂದೆ ಎಳ್ಳಷ್ಟೂ ನಡೆಯಲಿಲ್ಲ. ಆಗ ಕೃಷ್ಣನು ಭೀಮನನ್ನು ರಕ್ಷಿಸಲು ಬೆಂಕಿಗೆ ಹಾರಿದನು.

ಆವ ಶರವಿದ್ದೇಗುವುದು ಮೈ
ಗಾವನಸುರಾಂತಕನಲ್ಲೈ ತಾ
ನಾವ ವಹಿಲದೊಳುರಿಯೊಳೆಡೆಹಾಯ್ದನಿಲಜನ ತೆಗೆದ ।
ನಾವರಿಯೆವಾ ಪವನಜನ ಶ
ಸ್ತ್ರಾವಳಿಯನಾ ಫಲುಗುಣನ ಗಾಂ
ಡೀವವನು ಹರಿ ಸೆಳೆದುಕೊಂಡನು ಬಿಸುಟನವನಿಯಲಿ ॥ 49 ॥ (ದ್ರೋಣ ಪರ್ವ, ಸಂಧಿ 19)
ಮುರಹರನ ಪಾದಾರವಿಂದದ
ಹೊರೆಯೊಳಗಡಗಿತು ಹೋಯ್ತು ಭಯವು
ಬ್ಬರದೊಳಗೆ ಬೊಬ್ಬಿರಿದುವು ನಿಸ್ಸಾಳ ಕೋಟಿಗಳು ॥ 50 ನೆ ನುಡಿಯ ಎರಡನೆ ಭಾಗ ॥ (ದ್ರೋಣ ಪರ್ವ, ಸಂಧಿ 19)

ಕೃಷ್ಣನ ಮೈಗೆ ಯಾವ ಬಾಣವು ಹಾನಿಮಾಡಬಲ್ಲುದು? ಬೆಂಕಿಯಲ್ಲಿ ಹಾರಿ ಭೀಮನನ್ನು ಹೊರತೆಗೆದನು ಮತ್ತು ಅರ್ಜುನನ ಕೈಯಲ್ಲಿದ್ದ (ವರುಣಾಸ್ತ್ರವನ್ನು ಪ್ರಯೋಗಿಸಲು ಹಿಡಿದಿದ್ದ) ಗಾಂಡೀವವನ್ನು ತೆಗೆದು ಕೆಳಗೆ ಬಿಸಾಡಿದನು. ಹೀಗೆ ಎಲ್ಲರೂ ಶಸ್ತ್ರವಿಹೀನರಾದರು. ಕೃಷ್ಣನ ದಯೆಯಿಂದ ಭಯವು ಹೋಯಿತು, (ಸಂತೋಷದಿಂದ) ದೊಡ್ಡ ನಗಾರಿಗಳನ್ನು ಬಾರಿಸಿದರು. ನಾರಾಯಣಾಸ್ತ್ರವು ವ್ಯರ್ಥವಾಗಿ ಹೋಯಿತು. ಅಶ್ವತ್ಥಾಮನು ಹತಾಶನಾದನು.

ಕೆಲವು ಮಹಾಭಾರತದ ಕತೆಗಳಲ್ಲಿ ನಾರಾಯಣಾಸ್ತ್ರದ ಮುಂದೆ ಬೆನ್ನು ಹಾಕಿ ನಿಂತರೆ ಅದು ನಿರರ್ಥಕವಾಗುತ್ತದೆ ಎಂದಿದೆ. ಭೀಮನು ಬೆನ್ನು ತೋರಿಸುವುದು ಹೇಡಿತನವೆಂದು ನಿರಾಕರಿಸಿದಾಗ, ಕೃಷ್ಣನು ಅವನ ಮುಂದೆ ಶಸ್ತ್ರಕ್ಕೆ ಬೆನ್ನು ಕೊಟ್ಟು ನಿಂತು ಅವನನ್ನು ರಕ್ಷಿಸಿದನೆಂದು ಹೇಳಿದೆ.

**ಅರ್ಜುನನಿಗೆ ಕರ್ಣನ ಮೇಲೆ ಮರುಕ, ಭ್ರಾತೃಪ್ರೇಮದ ಭಾವನೆ[9]**

ಕರ್ಣಾರ್ಜುನರ ಭೀಕರ ಯುದ್ಧದಲ್ಲಿ ಶಲ್ಯನು ಸಿಟ್ಟಿನಿಂದ ಸಾರಥ್ಯವನ್ನು ಬಿಟ್ಟು ರಥದಿಂದ ಇಳಿದು ಹೋದಾಗ, ಕರ್ಣನು ಅರ್ಜುನನ್ನು ವಧಿಸಲು ನಿಶ್ಚಯಿಸಿದನು. ಆಗ ವಿಪ್ರನ ಶಾಪ ಫಲಿಸಿತು, ಕರ್ಣನ ರಥದ ಚಕ್ರವನ್ನು ಭೂಮಿ ನುಂಗಿದಳು, ಚಕ್ರವು ಹೂತುಹೋಯಿತು. ಅವನು ಬಿಲ್ಲನ್ನು ಕೆಳಗಿಟ್ಟು, ಚಕ್ರವನ್ನೆತ್ತಲು ಕೆಳಗಿಳಿದು ಅರ್ಜುನನಿಗೆ “ಸ್ವಲ್ಪ ಸೈರಿಸಿಕೊ, ಚಕ್ರವೆತ್ತಿದ ಮೇಲೆ ನನ್ನ ಪರಾಕ್ರಮ ನೋಡು” ಅಂದನು. ರಥಸ್ಥನಲ್ಲದ, ಕೈಯಲ್ಲಿ ಶಸ್ತ್ರವಿಲ್ಲದವನ ಮೇಲೆ ಬಾಣ ಹೂಡುವುದು ನೈತಿಕ ಯುದ್ಧವಲ್ಲ, ಹೀಗಾಗಿ ಅರ್ಜುನನು ತಾಳಿಕೊಂಡನು. ಕೃಷ್ಣನು ಬಿಡಲಿಲ್ಲ, ಕರ್ಣನ ವಧೆಗೆ ಹುರಿದುಂಬಿಸಿದ. ಆಗ ಅರ್ಜುನನಿಗೆ ಕರ್ಣನ ಮೇಲೆ ಎಲ್ಲಿಲ್ಲದ ಮರುಕವುಂಟಾಯಿತು. ಅವನು ಹೇಗೆ ಕೃಷ್ಣನೊಡನೆ ಭಾವುಕನಾಗಿ ಬೇಡಿಕೊಳ್ಳುತ್ತಾನೆಂದು ಕುಮಾರವ್ಯಾಸನು ಹೇಳುವ ರೀತಿ ನೋಡಿ.

“ಕೃಷ್ಣ, ಕರ್ಣನು ಶತ್ರುವಾಗಿರಲಿಕ್ಕಿಲ್ಲ, ಯಾಕೆಂದು ನನಗರಿಯದು. ಇವನ ಮೇಲೆ ಕರುಣೆ ಮೂಡುತ್ತದೆ, ಬಿಲ್ಲನ್ನೆತ್ತಲು ಕೈಗಳೇ ಮುಂದೆ ಬಾರವು. ಯಾವ ಸ್ನೇಹವೆಂದು ತಿಳಿಯದು, ನನ್ನ ಹೃದಯ ಕರಗಿ ಈತ ಶತ್ರುವೆಂಬ ಭಾವನೆ ತೊಲಗುತ್ತದೆ, ಕರ್ಣನು ನಿಜವಾಗಿ ಯಾರು? ದುರ್ಯೋಧನನ ಮೇಲಿರುವಂತೆ ಶತ್ರುತ್ವ ನಮಗೆ ಇವನ ಮೇಲೇಕೆ? ನಮಗಪಕಾರಿಯಿವನು, ನಿಜ. ಇವನ ಹತ್ಯೆಗೆ ಯೋಜಿಸುವುದಿಲ್ಲ. ವೈರವು ಹೋಗಿ ಯುಧಿಷ್ಠಿರನಿಗಿಂತ ಇವನಲ್ಲಿ ಇಮ್ಮಡಿ ಸ್ನೇಹವುಂಟಾಗುತ್ತದೆ, ಕರ್ಣನಾರು?” ಎಂದು ಪುನಃ ಬೇಡಿಕೊಂಡ.

ದೇವ ಹಗೆಯಾಗಿರನು ಕರ್ಣನಿ
ದಾವ ಹದನೆಂದರಿಯೆ ಮನದಲಿ
ನೋವು ಮಿಗುವುದು ಕೈಗಳೇಳವು ತುಡುಕುವಡೆ ಧನುವ|
ಜೀವವೀತನಮೇಲೆ ಕರಗುವು
ದಾವ ಸಖನೋ ಶತ್ರುವೆಂಬೀ
ಭಾವನೆಯ ಬಗೆ ಬೀಳುಕೊಂಡುದು ಕರ್ಣನಾರೆಂದ || 23 || (ಕು. ವ್ಯಾ. ಭಾ. ಕರ್ಣಪರ್ವ, ಸಂಧಿ 26).
ಕೌರವನ ಮೇಲಿರುವದಗ್ಗದ
ವೈರವೀತನಮೇಲೆ ನಮಗಪ
ಕಾರಿಯೀತನು ಮರಣದನುಸಂಧಾನವಿಲ್ಲ ಬರ |
ವೈರವುಪಶಮಿಸಿತು ಯುಧಿಷ್ಠಿರ
ವೀರನಿಂದಿಮ್ಮಡಿಯ ನೇಹದ
ಭಾರವಣೆ ತೋಱುವುದೇನ್ಯೆ ಕರ್ಣನಾರೆಂದ || 24 || (ಕು. ವ್ಯಾ. ಭಾ. ಕರ್ಣಪರ್ವ, ಸಂಧಿ 26).
ಋಷಿಗಳನುಮತದಿಂದ ಕುಂತಿಯ
ಬಸುರಲೇನುದಯಿಸಲೇ ನೀ
ನಸುರರಿಪು ಬಹುಕಪಟ ನಾಟಕ ಸೂತ್ರಧಾರನಲೆ |
ವಸುಮತಿಯ ಭಾರವನು ಸಲೆ ಹಿಂ
ಗಿಸುವ ಕೃತ್ಯವು ನಿನ್ನದೆನಗು

ಬ್ಬಸವಿದೇನೆಂದಳಿಯೆನಕಟಾ ಕರ್ಣನಾರೆಂದ || 27 || (ಕು. ವ್ಯಾ. ಭಾ. ಕರ್ಣಪರ್ವ, ಸಂಧಿ 26).

ಬಿಸುಟು ಹೋದನು ರಥವ ಸಾರಥಿ
ವಸುಧೆಯಲಿ ರಥವದ್ದು ಕೆಡೆದುದು
ನಿಶಿತಮಾರ್ಗಣವಿಲ್ಲ ಕಯ್ಯಲಿ ದಿವ್ಯಧನುವಿಲ್ಲ |
ಎಸುವೊಡೆಂತೇಳುವುವು ಕಯ್ ನೀ
ಬೆಸಸುವಡೆ ಮನವೆಂತು ಬಂದುದು
ಬಸುಱ ಶಿಖಿ ಬಲುಹಾಯ್ತು ಕರ್ಣನ ಕೊಲುವನಲ್ಲೆಂದ || 36 || (ಕು. ವ್ಯಾ. ಭಾ. ಕರ್ಣಪರ್ವ, ಸಂಧಿ 26).

ಗುರುವನೆಸುವಡೆ ಮೇಣು ಭೀಷ್ಮನ
ಸರಳ ತಡಿಕೆಗೆ ಚಾಚುವಡೆ ಧಿ
ಕ್ಕರಿಸುವಡೆ ಕೃಪ ಶಲ್ಯ ಸೈಂಧವ ಮುಖ್ಯ ಬಾಂಧವರ |
ತರಳಿದೆನೆ ತೇರೈಸಿದೆನೆ ಹೇ
ವರಿಸಿದೆನೆ ಹೋರಿದೆನೆ ಕಲಿತನ
ಕರಗಿತೇನೆಂದಳಿಯೆ ಕರ್ಣನ ಕೊಲುವನಲ್ಲೆಂದ || 37 || (ಕು. ವ್ಯಾ. ಭಾ. ಕರ್ಣಪರ್ವ, ಸಂಧಿ 26).

ಮುಂದುವರಿಸುತ್ತ ಅರ್ಜುನನು ಪುನಃ ಕೃಷ್ಣನೊಡನೆ ತನ್ನ ಮನವನ್ನು ಬಿಚ್ಚಿಡುತ್ತಾನೆ. “ಇವನೇನಾದರೂ ಋಷಿಗಳ ಅನುಗ್ರಹದಿಂದ (ನಮ್ಮಂತೆಯೇ) ಕುಂತಿಯಲ್ಲಿ ಹುಟ್ಟಿದವನೋ? ನೀನು ಕುತಂತ್ರಿ, ಭೂಭಾರವನ್ನಿಳಿಸುವುದೇ ನಿನ್ನ ಇಚ್ಛೆ, ಆದರೆ ನನ್ನ ಮನಸ್ಸಿನಲ್ಲೇಕೆ ತಳಮಳ, ಹೇಳಲಾರೆ, ಕರ್ಣನಾರು?” ಎಂದು ಮತ್ತೊಮ್ಮೆ ಅಂಗಲಾಚಿದ. “ಸಾರಥಿ ರಥಬಿಟ್ಟು ಹೋದ, ರಥದ ಚಕ್ರ ಭೂಮಿಯಲ್ಲಿ ಹೂತುಹೋಗಿದೆ, ಚೂಪಾದ ಬಾಣಗಳಿಲ್ಲ, ಕೈಯಲ್ಲಿ ಬಿಲ್ಲಿಲ್ಲ, ಅವನ ಮೇಲೆ ಆಕ್ರಮಣ ಮಾಡಲು ಕೈಗಳು ಏಳುವುದಿಲ್ಲ, ನಿನಗೆ ಈ ಮಾತು ಹೇಳಲು ಹೇಗೆ ಮನಬಂತು? (ನಿಶಿತ = ಚೂಪಾದ13, ಶಿಖಿ = ಬೆಂಕಿ11) ಹೊಟ್ಟೆಯಲ್ಲಿನ ಬೆಂಕಿ (ಇಲ್ಲಿ ಕಳವಳ) ಅತಿಯಾಯಿತು, ಕರ್ಣನನ್ನು ಕೊಲ್ಲುವುದಿಲ್ಲ. ದ್ರೋಣನನ್ನು ಸೋಲಿಸಲು, ಪಿತಾಮಹನನ್ನು ಶರಮಂಚದಲ್ಲಿ ಮಲಗಿಸಲು, ಕೃಪ, ಶಲ್ಯ, ಜಯದ್ರಥ, ಮತ್ತಿತರರನ್ನು ಎದುರಿಸಲು ಹಿಂದೆಗೆದೆನೇ, ಇಲ್ಲ, ಆದರೆ ನನ್ನ ಶೌರ್ಯವೇಕೆ ಇಂದು ಕ್ಷೀಣಿಸಿತು ಹೇಳಲಾರೆ, ಕರ್ಣನನ್ನು ಕೊಲ್ಲಲಾರೆ” ಎಂದ. ಅರ್ಜುನನ ಮನಸ್ಸಿನಲ್ಲಾದ ತುಮುಲವನ್ನು ಹೀಗೆ ಕುಮಾರವ್ಯಾಸನು ಹೃದಯಂಗಮವಾಗಿ ವಿವರಿಸಿದ್ದಾನೆ.

**ದುರ್ಯೋಧನನ ಸೋಲಿನ ನಂತರ**[10]

ಅರಸ ತಲೆಗುತ್ತಿದನು ದೃಗುಜಲ
ವುರವಣಿಸಿ ಮೌನದಲಿ ಫಲುಗುಣ
ನಿರೆ ಮುರಾರಿ ಸುಯೋಧನನ ಸರ್ವಾನುಗುಣಗಣವ |
ಪರಿಪರಿಯಲೆಚ್ಚರಿಸಿ ದುಗುಡವ
ಪರಿಹರಿಸಿ ಸಂತೈಸಿದಡೆ ಮುರ
ಹರನ ಬೈದನು ನಿನ್ನ ಮಗ ನಾನಾ ವಿಡಂಬದಲಿ || 37 || (ಗದಾಪರ್ವ, ಸಂಧಿ 37)

ಆರ ಬಸುರಲಿ ಬಂದು ಮೊಲೆಯುಂ
ಡಾರ ಮಡಿಲಲಿ ಬಳೆದು ಬಳಿಕಿನೊ
ಳಾರ ಹೆಂಡಿರ ಕೊಂಡು ಕಱು ತುಱುಗಾದು ಕಳವಿನಲಿ |
ವೀರ ದೈತ್ಯರ ಸದೆಬಡಿದು ಕುರು
ವೀರವಂಶದ ರಾಯರೆಮ್ಮೊಳು
ವೈರಬಂಧವ ಬಿತ್ತಿ ಕೊಂದವ ಕೃಷ್ಣ ನೀನೆಂದ || 38 || (ಗದಾಪರ್ವ, ಸಂಧಿ 37)

ಗದಾಯುದ್ಧದ ನಂತರ ದುರ್ಯೋಧನನು ಬಿದ್ದಲ್ಲಿ ಪಾಂಡವರನ್ನು ಕರಕೊಂಡು ಕೃಷ್ಣನು ಹೋದನು. ಎಷ್ಟೆಂದರೂ ದಾಯಾದಿಗಳು, ದುರ್ಯೋಧನನ ದುರವಸ್ಥೆಯನ್ನು ಕಂಡು ಮರುಕಗೊಂಡರು. ಯುಧಿಷ್ಠಿರನು ತಲೆಬಗ್ಗಿಸಿದನು, ಅರ್ಜುನನು ಕಣ್ಣೀರುಗರೆದನು. ದುರ್ಯೋಧನನು ಅವರಿಗೆ ಮಾಡಿದ ಅಪಚಾರಗಳನ್ನೆಲ್ಲಾ ಕೃಷ್ಣನು ನೆನಪಿಸಿ ಅವರ ದುಃಖವನ್ನು ಪರಿಹರಿಸಿದಾಗ ನಿನ್ನ ಮಗನು (ಸಂಜಯನು ಧೃತರಾಷ್ಟ್ರನಿಗೆ ಹೇಳುವುದು) ಕೃಷ್ಣನನ್ನು ನಾನಾ ರೀತಿಯಲ್ಲಿ ಬೈದನು. “ಯಾರದೋ ಹೊಟ್ಟೆಯಲ್ಲಿ ಹುಟ್ಟಿ, ಯಾರದೋ ಎದೆಹಾಲು ಕುಡಿದು ಅವರ ಮಡಿಲಲ್ಲಿ ಬಳೆದು, ಯಾವಾರದೋ ಹೆಂಡಿರನ್ನು ಕದ್ದು, ದನಕರುಗಳನ್ನು ಕಾದು, ಮೋಸದಿಂದ ರಕ್ಕಸರನ್ನು ಕೊಂದು, ಕುರುವಂಶದ ನಮ್ಮಲ್ಲಿ ವೈರವನ್ನು ಬಿತ್ತಿ ಕೊಂದವನು ನೀನೇ ಕೃಷ್ಣ” ಎಂದ.

ಬಣಗುಗಳು ಭೀಮಾರ್ಜುನರು ಕಾ
ರಣಿಕ ನೀನು ನಿನ್ನುಪಾಯವು ಧರ್ಮದ
ಕಣಿ ಯುಧಿಷ್ಠಿರನೆತ್ತ ಬಲ್ಲನು ನಿನ್ನ ಮಾಯೆಗಳ |
ಸೆಣಸನಿಕ್ಕಿದೆ ನಮ್ಮೊಳಗೆ ಧಾ
ರುಣಿಯ ಭಾರವ ಬಿಡಿಸಲೋಸುಗ
ರಣವ ಹೊತ್ತಿಸಿ ನಮ್ಮ ಬೇಂಟೆಯನಾಡಿಸಿದೆಯೆಂದ || 39 || (ಗದಾಪರ್ವ, ಸಂಧಿ 37)

ಪಾಪಿ ನಮ್ಮಯ ಗೋತ್ರದ ವಧೆಯ
ಶಾಪ ನಿನ್ನನುತಾಗುವುದು ಸ
ರ್ವಾಪರಾಧವು ನಿನ್ನದೀ ಕೌರವ ಪಾಂಡವರ |
ಕೋಪವನು ಕೊನರಿಸುವ ನಮ್ಮಯ
ತಾಪವನು ನೂಕುವ ಕುಬುದ್ಧಿ
ವ್ಯಾಪಕನು ನೀ ವೈರಿಯಲ್ಲದೆ ಭೀಮನಲ್ಲೆಂದ || 40 || (ಗದಾಪರ್ವ, ಸಂಧಿ 37)

ರಣಮುಖದೊಳೀ ಕ್ಷತ್ರಧರ್ಮದ
ಕುಣಿಕೆ ತಪ್ಪದೆ ವೇದಶಾಸ್ತ್ರದ
ಭಣಿತೆ ನೋಯದೆ ವೀರವೃತ್ತಿಯ ಪದದ ಪಾಡರಿದು |
ಸೆಣಸು ಸೋಂಕಿದ ಛಲದ ಬಾಷೆಯೊ
ಳಣುವ ಹಿಂಗದೆ ಜೀವದಾಸೆಗೆ
ಮಣಿಯದಳಿದುದನೆಲ್ಲ ಬಲ್ಲರು ಕೃಷ್ಣ ಕೇಳೆಂದ || 40 || (ಗದಾಪರ್ವ, ಸಂಧಿ 37)

"ಭೀಮಾರ್ಜುನರು ಬುದ್ಧಿಯಿಲ್ಲದವರು (ಬಣಗುಗಳು = ಲೆಕ್ಕಕ್ಕಿಲ್ಲದವರು, ಕೀಳರು12), ಅದಕ್ಕೆ ಕಾರಣ ನೀನು ಮತ್ತು ನಿನ್ನ ಕುತಂತ್ರಗಳು. ಧರ್ಮಶಾಸ್ತ್ರದ ಗಣಿಯಾದ ಯುಧಿಷ್ಠಿರನು ನಿನ್ನ ಮಾಯೆಗಳನ್ನು ಹೇಗೆ ಅರ್ಥಮಾಡಿಕೊಳ್ಳಬಲ್ಲ? ನಮ್ಮೊಳಗೆ ವೈರವನ್ನು ಬಿತ್ತಿ, ಭೂಭಾರವನ್ನು ಇಳಿಸಲು ನಮ್ಮೊಳಗೆ ಯುದ್ಧವನ್ನು ಮಾಡಿಸಿ, ನಮ್ಮ (ಕೌರವರ) ಹತ್ಯೆಯನ್ನು ಮಾಡಿಸಿದೆ" ಎಂದ. "ಲೋ ಪಾಪಿ, ನಮ್ಮ ಗೋತ್ರವಧೆಯ ಶಾಪ ನಿನಗೆ ತಾಗುವುದು. ನಮ್ಮೊಳಗಿನ ದ್ವೇಷವನ್ನು ಚಿಗುರಿಸಿದ ಎಲ್ಲಾ ಅಪರಾಧವು ನಿನ್ನದು. ನಮ್ಮೊಳಗೆ ವೈರವನ್ನು ತೊಡಗಿಸುವ ದುಷ್ಟಬುದ್ಧಿಯುಳ್ಳ ನೀನು ನನ್ನ ವೈರಿಯಲ್ಲದೆ ಭೀಮನಲ್ಲ" ಎಂದ. ಮುಂದುವರಿಸುತ್ತಾ "ನಾನು ರಣರಂಗದಲ್ಲಿ ಕ್ಷಾತ್ರಧರ್ಮಕ್ಕೆ ತಪ್ಪದಂತೆ, ವೇದಶಾಸ್ತ್ರಗಳಲ್ಲಿನ ಹೇಳಿಕೆಗಳಿಗೆ ಕುಂದು ಬಾರದಂತೆ, ವೀರವೃತ್ತಿಯನ್ನರಿದು ಯುದ್ಧಮಾಡಿದ, ಛಲದಲ್ಲಿ ರವಷ್ಟೂ ಕಡಿಮೆಯಾಗದಂತೆ, ಜೀವದ ಹಂಗನ್ನು ಬಿಟ್ಟಿರುವುದನ್ನು ಎಲ್ಲರೂ ಅರಿತಿದ್ದಾರೆ, ಕೃಷ್ಣ ಕೇಳು" ಎಂದ. ಇದರ ನಂತರ ದುರ್ಯೋಧನನ ಮೇಲೆ ಹೂಮಳೆಯಾಯಿತಂತೆ (ಭಣಿತ = ಹೇಳಿಕೆ, ನುಡಿ12).

**ಅರ್ಜುನನ ರಥದ ದಹನ[10]**

ಇಳಿ ರಥವನೆಲೆ ಪಾರ್ಥ ಬಳಿಕಾ
ನಿಳಿವೆನೆಂದನು ಶೌರಿ ನೀವ್ ಮು
ನ್ನಿಳಿವುದೆಂದನು ಪಾರ್ಥನಾಯ್ತು ವಿವಾದವಿಬ್ಬರಿಗೆ |
ಎಲೆ ಮರುಳೆ ನಾ ಮುನ್ನಿಳಿಯೆ ನೀ
ನಳಿವೆಲಾ ಸಾಕಿನ್ನು ಗರ್ವದ
ಗಳಹತನವನು ಬಳಿಕಾ ತೋಱುವೆ ರಥವನಿಳಿಯೆಂದ || 48 || (ಗದಾಪರ್ವ, ಸಂಧಿ 8)
ಬಳಿಕಾ ಫಲುಗುಣ ರಥದ ದಿಳೆಗೆ
ಹಾಯ್ದನು ಕೃಷ್ಣ ನೀನಿ
ನ್ನಿಳಿಯೆನಲು ಚಮ್ಮಟಿಗೆ ವಾಘೆಯ ನೇಣ ರಥದೊಳಗೆ |
ಇಳುಹಿ ನಗುತ ಮುಕುಂದ ರಥದಿಂ
ದಿಳಿಯೆ ಛಟಛಟಿಲೆಂದು ಕಿಡಿಯು
ಚ್ಚಳಿಸಲುರಿದುದು ತೇರು ಕೇಸುರಿ ನಭವನಪ್ಪಳಿಸೆ || 49 ||
(ಗದಾಪರ್ವ, ಸಂಧಿ 8)

ಯುದ್ಧದ ನಂತರ ಸಾರಥಿಗಳು ರಥದಿಂದಿಳಿದ ನಂತರ ರಥಸ್ಥ ವೀರರು ಇಳಿಯುವುದು ಕ್ರಮ. ಆದರೆ ಕೃಷ್ಣನು ಅರ್ಜುನನಿಗೆ ನೀನು ಮೊದಲಿಳಿ ಅಂದಾಗ ಅರ್ಜುನನು ಕೃಷ್ಣನಿಗೆ ನೀನೇ ರೂಢಿಯಂತೆ ಮೊದಲು ಅಂದನು. ಈ ವಿಚಾರದಲ್ಲಿ ಇಬ್ಬರೊಳಗೆ ವಿವಾದವಾಯಿತು. "ಎಲೆ ಹುಚ್ಚ, ನಾನು ಮೊದಲಿಳಿದರೆ ನೀನುಳಿಯಲಾರೆ, ನಿನ್ನ ಗರ್ವದ ಮಾತುಗಳನ್ನು ಮತ್ತೆ ಆಡು, ಮೊದಲು ಇಳಿ" ಎಂದು ಕೃಷ್ಣನು ಹೇಳಿದನು. ಅರ್ಜುನನಿಳಿದ ನಂತರ ಚಾಟಿ, ಕಡಿವಾಣಗಳನ್ನು ರಥದಲ್ಲಿ ಬಿಟ್ಟು ಕೃಷ್ಣನು ನಗುತ್ತಾ ಕೆಳಗಿಳಿದಾಕ್ಷಣ ಛಟಛಟಿಲೆಂಬ ಕೆಂಪು ಬೆಂಕಿಯಲ್ಲಿ ರಥವುರಿದು ಆಕಾಶಕ್ಕೆ ಅಪ್ಪಳಿಸಿತು (ಕೇಸುರಿ = ಕೆಂಪು ಬೆಂಕಿ[11]).

ಧ್ವಜದ ಹಲಗೆಯನೊದೆದು ಹಾಯ್ದನು
ನಿಜನಿವಾಸಕೆ ಹನುಮ ಧೂಮ
ಧ್ವಜನಮಯವಾದುದು ರಥಾಶ್ವರಥಾಂಗರಾಜಿಗಳು |
ವಿಜಯ ಭೀಮಾದಿಗಳು ಕಂಡ
ಕ್ಕಜದೊಳಾಕಸ್ಮಿಕದ ಕಿಚ್ಚಿನ
ಗಜಬಜವಿದೇನೇನುತ ನೆರೆ ಬೆಚ್ಚಿದರು ಭೀತಿಯಲಿ || 50 ||
(ಗದಾಪರ್ವ, ಸಂಧಿ 8)
ಹರಿಯಿದೇನಾಕಸ್ಮಿಕದ ದ
ಳ್ಳುರಿಯೊಳೆದ್ದುದು ತೇರು ನಮಗೀ
ಯುರಿಯ ಭಯ ಭಂಗಿಸಿತಿದೇನು ನಿಮಿತ್ತವಿದಕೆನಲು |
ಉರಿವುದಂದೇ ತೇರು ಕರ್ಣನ
ಗುರುನದೀನಂದನನ ದೈವಿಕ
ಶರಹತಿಯೊಳೆಮ್ಮಿಂದ ನಿಂದುದು ಪಾರ್ಥ ಕೇಳೆಂದ || 51 ||
(ಗದಾಪರ್ವ, ಸಂಧಿ 8)

ಹನುಮನು ಧ್ವಜದ ಹಲಗೆಯನ್ನು ಮೆಟ್ಟಿ, ಗಗನಕ್ಕೆ ಹಾರಿ ತನ್ನ ಸ್ಥಾನಕ್ಕೆ ಹೋದನು. ರಥ, ಅಶ್ವ, ರಥದಚಕ್ರಗಳ ಸಾಲುಗಳನ್ನು (ರಥಾಂಗ = ರಥದಚಕ್ರ12, ರಾಜಿ = ಸಾಲು, ಶ್ರೇಣಿ12) ಅಗ್ನಿಯು (ಧೂಮಧ್ವಜ = whose banner is smoke, ಅಂದರೆ ಅಗ್ನಿ11) ಆವರಿಸಿತು. ಇದನ್ನು ಕಂಡ ಭೀಮಾರ್ಜುನರು ಬೆದರಿ, ಇದೇನೆಂದು ಅಚ್ಚರಿಪಟ್ಟರು. ಕೃಷ್ಣನೊಡನೆ ಇದರ ಕಾರಣವನ್ನು ಕೇಳಿದಾಗ "ಈ ರಥವು ಕರ್ಣ, ದ್ರೋಣ ಮತ್ತು ಭೀಷ್ಮರ ದಿವ್ಯ ಬಾಣಗಳ ಆಘಾತಕ್ಕೆ ಎಂದೋ ಸುಟ್ಟು ಹೋಗಬೇಕಿತ್ತು. ನಾನದರಲ್ಲಿದ್ದುದರಿಂದ ಹಾಗಾಗಲಿಲ್ಲ" ಎಂದು ವಿವರಿಸಿದನು. ಈ ಆಶ್ಚರ್ಯಕರ ಘಟನೆಯನ್ನು ಕುಮಾರವ್ಯಾಸನು ಚೆನ್ನಾಗಿ ಮೂಡಿಸಿದ್ದಾನೆ.

ಮಹಾಭಾರತವನ್ನು ಅನೇಕರು ಬರೆದಿದ್ದಾರೆ. ಈ ಕತೆಗಳಲ್ಲಿ ವ್ಯತ್ಯಾಸಗಳಿವೆ ಅಥವಾ ಘಟನೆಗಳು ಹಿಂದುಮುಂದಾಗಿವೆ ಎಂದು ನಾವು ನೆನಪಿಟ್ಟುಕೊಳ್ಳಬೇಕು. ನಾನು ಕುಮಾರವ್ಯಾಸನನ್ನು ಉದ್ಧರಿಸಿ ಅವನ ಮಾತಿನಲ್ಲೇ ಬರೆದು ಅರ್ಥ ಕೊಟ್ಟಿದ್ದೇನೆ. ನಿಘಂಟುಗಳಿಂದ ಅಗತ್ಯವಿದ್ದಲ್ಲಿ ಅರ್ಥ ಕೊಟ್ಟಿದ್ದೇನೆ. ಕನ್ನಡ ಮತ್ತು ಕುಮಾರವ್ಯಾಸನ ಮೇಲಿನ ಅಭಿಮಾನದಿಂದ ಬರೆದ ಈ ಲೇಖನವು ಸಹೃದಯರಿಗೆ ಒಗ್ಗಿ ನಾನು ಪೀಠಿಕೆಯಲ್ಲಿ ಆಶಿಸಿದ್ದಂತೆ 'ಕನ್ನಡ ಭಾರತ'ವನ್ನು ಹೆಚ್ಚಿನವರು ಓದುವಂತಾಗುವುದೆಂದು ಹಾರೈಸುತ್ತೇನೆ.

**ಮೂಲಗ್ರಂಥಗಳು ಮತ್ತು ಸಹಾಯಕ ಹೊತ್ತಿಗೆಗಳು**


1. ರಾಷ್ಟ್ರಕವಿ ಎಂ. ಗೋವಿಂದ ಪೈ., ಮಂಜೇಶ್ವರ, - (1995) 'ಕುಮಾರವ್ಯಾಸನ ಕಾಲವಿಚಾರ', ಗೋವಿಂದ ಪೈ ಸಂಶೋಧನ ಸಂಪುಟ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು, ಉಡುಪಿ., ಪ್ರಥಮ ಮುದ್ರಣ. ಪುಟ 331 – 338. Kavyalaya Publishers, Mysore 570 014.
2. ಶ್ಯಾಮಾಚಾರ್ಯರು, ವಿ., ಸಂಪಾದಕರು, - (1912) ಕುಮಾರವ್ಯಾಸ ಮಹಾಕವಿ ವಿರಚಿತ ಮಹಾಭಾರತದ ಆದಿಪರ್ವದೊಳ್ ಸಂಭವಪರ್ವಂ, ಸಂಪುಟ I, Government Oriental Library Series, Government Branch Press.
3. ಶ್ಯಾಮಾಚಾರ್ಯರು, ವಿ., ಸಂಪಾದಕರು, - (1913) ಕುಮಾರವ್ಯಾಸ ಮಹಾಕವಿ ವಿರಚಿತ ಮಹಾಭಾರತದ ಆದಿಪರ್ವದೊಳ್ ಜತುಗೃಹಾದಿ ಪರ್ವಗಳು, ಸಂಪುಟ II, Government Oriental Library Series, Government Branch Press.
4. ಶ್ಯಾಮಾಚಾರ್ಯರು, ವಿ., ಸಂಪಾದಕರು, - (1918) ಕುಮಾರವ್ಯಾಸ ಮಹಾಕವಿ ವಿರಚಿತ ಮಹಾಭಾರತದೊಳ್ ಅರಣ್ಯಪರ್ವ, ಸಂಪುಟ IV, Government Oriental Library Series, Government Branch Press.
5. ಶ್ಯಾಮಾಶಾಸ್ತ್ರಿ, ಆರ್., ಸಂಪಾದಕರು, - (1920) ಕುಮಾರವ್ಯಾಸ ಮಹಾಕವಿ ವಿರಚಿತ ಮಹಾಭಾರತದೊಳ್ ವಿರಾಟಪರ್ವ, ಸಂಪುಟ V, Government Oriental Library Series, Government Branch Press.
6. ಶ್ಯಾಮಾಶಾಸ್ತ್ರಿ. ಆರ್., ಸಂಪಾದಕರು, - (1922) ಕುಮಾರವ್ಯಾಸ ಮಹಾಕವಿ ವಿರಚಿತ ಮಹಾಭಾರತದೊಳ್ ಉದ್ಯೋಗಪರ್ವ, ಸಂಪುಟ VI, Government Oriental Library Series, Government Branch Press.
7. ಶ್ರೀನಿವಾಸಾಚಾರ್. ಡಿ., ಮತ್ತು ನರಸಿಂಹಾಚಾರ್. ಡಿ. ಎಲ್., ಸಂಪಾದಕರು, - (1933) ಕುಮಾರವ್ಯಾಸ ಮಹಾಕವಿ ವಿರಚಿತ ಮಹಾಭಾರತದೊಳ್ ಭೀಷ್ಮಪರ್ವ, ಸಂಪುಟ VII, Government Oriental Library Series, Government Branch Press.
8. ಬಸವಲಿಂಗಯ್ಯ. ಎಂ. ಎಸ್., ಮತ್ತು ಅನಂತರಂಗಚಾರ್, ಎನ್., ಸಂಪಾದಕರು. – (1936) ಕುಮಾರವ್ಯಾಸ ಮಹಾಕವಿ ವಿರಚಿತ ಮಹಾಭಾರತದೊಳ್ ದ್ರೋಣಪರ್ವ, ಸಂಪುಟ VIII, Government Oriental Library Series, Government Branch Press.
9. ಕನ್ನಡ ಮಹಾಭಾರತ ಸಂಪಾದಕೀಯ ಸಮಿತಿ, ಎನ್, ಅನಂತರಂಗಾಚಾರರ ಸಹಾಯದಿಂದ ಸಂಪಾದನ – (1940) ಕುಮಾರವ್ಯಾಸ ಮಹಾಕವಿ ವಿರಚಿತ ಮಹಾಭಾರತದೊಳ್ ಕರ್ಣಪರ್ವ, ಸಂಪುಟ IX, Government Oriental Library Series, Government Branch Press.
10. ಕನ್ನಡ ಮಹಾಭಾರತ ಸಂಪಾದಕೀಯ ಸಮಿತಿ, ಎನ್, ಅನಂತರಂಗಾಚಾರರ ಸಹಾಯದಿಂದ ಸಂಪಾದನ - (1947) ಕುಮಾರವ್ಯಾಸ ಮಹಾಕವಿ ವಿರಚಿತ ಮಹಾಭಾರತದೊಳ್ ಶಲ್ಯ ಮತ್ತು ಗದಾಪರ್ವ, ಸಂಪುಟ X, Government Oriental Library Series, Government Branch Press.
11. Kittel., Rev. Ferdinand. BGEM.- (1894) A Kannada – English Dictionary, Basel Mission Book & Trust Depository, Mangalore.
12. ಕವಲಿ., ಪಂಡಿತ ಎ. ಜೆ., ಸಂಪಾದಕರು – (1985) ಸಚಿತ್ರ ಕನ್ನಡ – ಕನ್ನಡ ಕಸ್ತೂರೀ ಕೋಶ, ರಾಮಾಶ್ರಯ ಬುಕ್ ಡಿಪೋ, ಧಾರವಾಡ, ಪಂಚಮ ಮುದ್ರಣ.
13. ಚಕ್ರವರ್ತಿ., ಜಿ ಎನ್. :– (2013) ಸಂಸ್ಕೃತ – ಕನ್ನಡ ನಿಘಂಟು, ಗೀತಾ ಬುಕ್ ಹೌಸ್, ಮೈಸೂರು, ಪರಿಷ್ಕೃತ ತೃತೀಯ ಸಂಸ್ಕರಣ,